

## ಶ್ರೀಸರ್ವಮೂಲ ಸಂದೇಶ

**ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಲಂ ।**
**ತಥಾಪಿ ಮತ್ಕೃತಾ ಪೂಜಾ ತತ್ಪ್ರಸಾದೇನ ನಾನ್ಯಥಾ ।**
**ತದ್ಭಕ್ತಿಃ ತತ್ಫಲಂ ಮಹ್ಯಂ ತತ್ಪ್ರಸಾದಃ ಪುನಃ ಪುನಃ ।**

ಹರಿಯು ತನ್ನ ಪೂಜೆಯನ್ನು ಹಾಗೂ ಇತರ ಎಲ್ಲ ಜಗತ್ತಿನ ಕರ್ಮಗಳನ್ನು ತಾನೇ ಮಾಡುತ್ತಿರುವನು. ಹಾಗಿದ್ದರೂ ಅವನ ಅನುಗ್ರಹದಿಂದ ಅವನ ಪೂಜೆಯನ್ನು ನಾನೂ ಮಾಡುವೆನು. ಪೂಜೆಯ ಫಲ ರೂಪವಾಗಿ ಅವನ ಭಕ್ತಿ ಹಾಗೂ ನಿರಂತರ ಅನುಗ್ರಹವನ್ನು ಮಾತ್ರ ಬೇಡುವೆನು.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**


**ಸಂಪುಟ–8 ಸಂಚಿಕೆ–4 ಸರ್ವಧಾರಿ ಸಂ.॥ ಪಾಲ್ಗುಣ–ಚೈತ್ರ ಏಪ್ರಿಲ್ 2009**

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

**www.livepravachana.com**

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 1 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 2 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 4 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 6 |
| **ವಿದ್ಯಾಮಾನ್ಯ ಆರಾಧನಾಪ್ರಯುಕ್ತ ವಿಶೇಷ ಲೇಖನ** | | **8** |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 12 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 18 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 20 |
| **ಜೀವನಯಜ್ಞ** | ಶ್ರೀ ಸುನಂದಕೀ | 23 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೇ ಲಕ್ಷ್ಮೀಶಾಚಾರ್ಯ | 27 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣಾಚಾರ್ಯ | 29 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 31 |
| **ಆಂಜನೇಯ ಜಯಂತಿಯ ಸೌರಭ** | ಸಗ್ರಿ | 33 |
| **ಶ್ರೀ ಕೃಷ್ಣಂ ವಂದೇ ಜಗದ್ಗುರುಂ** | **ಬಡನಿಡಿಯೂರು ವಾಸುದೇವ ಭಟ್** | 35 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 45 |



**ಪ್ರಕಾಶಕರು**
ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**
ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಂಪಾದಕ ಮಂಡಳಿ:**
ವಿ॥ ಬಲರಾಮ ಭಟ್ಟ, ಉಡುಪಿ
ವಿ॥ ಮೋಹನಾಚಾರ್ಯ ಬೆಂಗಳೂರು
ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**
ಶ್ರೀ ರಘುಪತಿ ತಂತ್ರಿ, ಬೆಂಗಳೂರು
ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ
ಶ್ರೀ ಹರ್ಷ ಬೆಂಗಳೂರು

ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು
ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

**ಬಿಡಿ ಪ್ರತಿ** : **ರೂ. 8.00**
**ವಾರ್ಷಿಕಚಂದಾ :** ರೂ. 90.00
**ಸದಸ್ಯರು** : ರೂ. 2,250.00
**15 ವರ್ಷಕ್ಕೆ** : ರೂ. 1,250.00

**ಪೋಷಕರು :** ರೂ. 3,000.00



ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು

**ವಿದ್ವತ್ ಪ್ರಪಂಚ**



# ಗೀತಾಮೃತ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಬಂಧುಗಳ ಆತ್ಮಕ್ಕೆ ನಾಶವಿಲ್ಲದಿದ್ದರೂ ದೇಹನಾಶವಾಗುವ ಪ್ರಯುಕ್ತ ಬಂಧುಜನರ ದರ್ಶನವೇ ಇಲ್ಲವಾದ್ದರಿಂದ ದುಃಖವನ್ನು ಅನುಭವಿಸಬೇಕಾಗುತ್ತದೆ ಈ ಕಾರಣಕ್ಕಾಗಿ ನಾನು ಯುದ್ಧವನ್ನು ಮಾಡಲಾರೆ ಎಂಬುದಾಗಿ ಅರ್ಜುನನು ಶ್ರೀಕೃಷ್ಣನಲ್ಲಿ ಭಿನ್ನವಿಸುತ್ತಿರಲು ಶ್ರೀಕೃಷ್ಣನು ನಸುನಗುತ್ತಾ ಈ ರೀತಿಯಾಗಿ ಉಪದೇಶವನ್ನು ಮಾಡುತ್ತಾನೆ. ಎಲೋ! ಅರ್ಜುನನೇ ಸುಖ ದುಃಖಗಳಿಗೆ ವಿಷಯಸಂಬಂಧಗಳು ಮಾತ್ರ ಕಾರಣವಾಗಲಾರದು. ಆ ವಿಷಯಗಳಲ್ಲಿ ಸ್ನೇಹ ಅಥವಾ ಆ ವಸ್ತು ನಮ್ಮದು ಎಂಬ ಅಭಿಮಾನ ಬೆಳಸಿಕೊಂಡರೆ ಮಾತ್ರ ಅದರ ಪ್ರಾಪ್ತಿಯಿಂದ ಸುಖವು, ಆ ವಸ್ತುಗಳ ವಿಯೋಗದಿಂದ ದುಃಖವೂ ಉಂಟಾಗುತ್ತದೆ. ಒಂದು ವೇಳೆ ಅಭಿಮಾನವೇ ಇಲ್ಲವಿದ್ದ ಪಕ್ಷದಲ್ಲಿ ಸುಖವಾಗಲಿ ದುಃಖವಾಗಲಿ ಉಂಟಾಗಲಾರದು. ನಿದ್ರಾವಸ್ಥೆಯಲ್ಲಿರುವ ಪುರುಷನನ್ನು ನೂತನವಸ್ತ್ರ –ಚಂದಾನಾದಿಗಳಿಂದ ಅಲಂಕರಿಸಿದರೆ ಅವನಿಗೆ ಸುಖವಾಗುವುದಿಲ್ಲ. ನಿದ್ರಾವಸ್ಥೆಯಲ್ಲಿ "ನನ್ನ ದೇಹ" ಎಂಬ ಅಭಿಮಾನವೇ ಇಲ್ಲವಾದ ಕಾರಣ ದೇಹಕ್ಕೆ ಪೂಜೆಯನ್ನು ಮಾಡಿದರೂ ಸಂತೋಷವಾಗುವುದಿಲ್ಲ. ಪುರುಷನು ಒಂದು ಸ್ತ್ರೀಯನ್ನು ಲಗ್ನ ಮಾಡಿಕೊಂಡ ಬಳಿಕ ಆ ಹುಡುಗಿಗೆ ಅನಾರೋಗ್ಯಾದಿಗಳು ಬಂದರೆ ದುಃಖಪಡುತ್ತಾನೆ. ಆದರೆ ಅದೇ ಹುಡುಗಿ ಲಗ್ನಕ್ಕಿಂತ ಮೊದಲು ಪರಿಚಯವೇ ಇಲ್ಲದ ಸಂದರ್ಭದಲ್ಲಿ ಅನಾರೋಗ್ಯದಿಂದ ಮರಣ ಸಂಭವಿಸಿದರೂ ಈತನಿಗೆ ದುಃಖವಾಗಲಾರದು. ಯಾಕೆಂದರೆ ಲಗ್ನಕ್ಕಿಂತ ಮೊದಲು ನನ್ನವಳೆಂಬ ಅಭಿಮಾನವಿರುವುದಿಲ್ಲ. ವಿವಾಹವಾದ ನಂತರದಲ್ಲಿ ಈ ಅಭಿಮಾನ ಬಂದದ್ದರಿಂದಲೇ ದುಃಖಾದಿಗಳನ್ನು ಹೊಂದುತ್ತಾರೆ. ಈ ಎಲ್ಲಾ ದೃಷ್ಟಾಂತಗಳಿಂದ ಅಭಿಮಾನ ಸಹಿತವಾದ ವಿಷಯ ಸಂಬಂಧಗಳೇ ಸುಖ–ದುಃಖಗಳಿಗೆ ಕಾರಣ ಎಂದು ತಿಳಿಯಬಹುದು. ಈ ರೀತಿಯಾದ ಅಭಿಮಾನವನ್ನು ನೀನು ಬಿಟ್ಟು ಬಿಡು. ಎಲ್ಲಾ ವಸ್ತುಗಳೂ ಸರ್ವಸ್ವಾಮಿಯಾದ ಭಗವಂತನದ್ದು. ಪ್ರಾಪಂಚಿಕವಾದ ಯಾವುದೇ ವಸ್ತುಗಳು ನನ್ನದಲ್ಲ ಎಂಬ ಎಚ್ಚರವನ್ನು ಹೊಂದಿದವನಾಗು. ಈ ವಿಷಯವಸ್ತುಗಳು ಬಹಳ ಉತ್ತಮವಾದುದು, ಸುಂದರವಾದುದು, ನನ್ನ ಸುಖಕ್ಕೆ ಸಾಧನವಾದುದು ಎಂಬ ಸ್ನೇಹರೂಪ ಅಭಿಮಾನವನ್ನು ಎಲ್ಲಿಯೂ

(...3)

ಪ್ರವಚನ ಮಾಲಿಕೆ

ಭಾಗ–13

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹ: ಕೃಷ್ಣಾ

ಒಬ್ಬ ವ್ಯಕ್ತಿ ತಾನು ಸಾಧನಾನುಷ್ಠಾನದಲ್ಲಿ ತೊಡಗಬೇಕಾದರೆ ಮೊದಲು ಅವನಿಗೆ ಆಹಾರದ ಮೇಲೆ ವೈರಾಗ್ಯ ಬರಬೇಕೆಂದು ಹೇಳುತ್ತಾರೆ. ಆದ್ದರಿಂದ ಭೀಮಸೇನನು ಬೇರೆ ಯಾವುದೇ ರೀತಿಯಿಂದ ಧೃತರಾಷ್ಟ್ರನನ್ನು ತಿದ್ದದೇ ಅವನು ಆಹಾರ ಸೇವಿಸುವಾಗಲೇ ಬಂದು ತಿದ್ದುತ್ತಾನೆ. ಯಾಕೆಂದರೆ, ನಾವು ನಮಗೆ ಪ್ರಿಯರಾದವರನ್ನು ತಿದ್ದಲು ಪ್ರಶಸ್ತಕಾಲಕ್ಕಾಗಿ ಕಾಯದೆ, ಎಲ್ಲಾ ಕಾಲದಲ್ಲೂ ತಿದ್ದಲು ಸಿದ್ಧರಾಗಿರುತ್ತೇವೆ. ಧೃತರಾಷ್ಟ್ರನಿಗೆ ಇಂದ್ರಿಯ–ನಿಗ್ರಹವಿಲ್ಲದ್ದರಿಂದ ಭೀಮಸೇನ ಸ್ವಯಂ ಅವನನ್ನು ಉದ್ಧಾರ ಮಾಡಲು ಮುಂದಾದನು. ಹಾಗಾದರೆ, ನಾವು ಸಮಾಜದಲ್ಲಿ ದಾರಿ ತಪ್ಪಿ ಬೇರೆ ದಾರಿ ಹಿಡಿದಾಗ, ನಮ್ಮನ್ನು ತಿದ್ದುವ ಕೆಲಸವು ವಾಯುದೇವರಿಗೆ ಸೇರುತ್ತದೆ. ಎಲ್ಲ ಪ್ರಾಣಿಗಳು ಒಂದೊಂದೇ ಇಂದ್ರಿಯಗಳಿಂದ ಸಾಯುತ್ತಾವಂತೆ. ಮನುಷ್ಯನು ಮಾತ್ರ ಐದೂ ಇಂದ್ರಿಯಗಳಿಂದ ಸಾಯುತ್ತಾನೆ ಅನ್ನುತ್ತಾರೆ.

**'ಕುರಂಗ ಮಾತಂಗ ಪತಂಗ ಭೃಂಗ ಮೀನಾಹತಾಃ ಪಂಚಭಿರೇವ ಪಂಚ'**

ಬೇಟೆಯ ಕಾಲದಲ್ಲಿ, ಜಿಂಕೆಗಳು ಸಂಗೀತಕ್ಕೆ ಕಿವಿಕೊಟ್ಟು ರಾಜರುಗಳ ಕೈಗೆ ಸಿಕ್ಕಿ ಸಾಯುತ್ತವೆ. ಆನೆಗಳನ್ನು ಬಾಳೆ ಅಥವಾ ಕಬ್ಬುಗಳನ್ನು ಬೆಳೆಸಿ, ತಂಪಾದ ವಾತಾವರಣವನ್ನು ನಿರ್ಮಿಸಿ ಖೆಡ್ಡದ ಮೂಲಕ ಹಿಡಿಯಲಾಗುತ್ತದೆ. ದೀಪದ ಬಣ್ಣಕ್ಕೆ ಮರುಳಾಗಿ ಚಿಟ್ಟೆಗಳು ಸಾಯುತ್ತವೆ. ಭ್ರಮರಗಳು ಹೂವಿನ ಪರಿಮಳವನ್ನು ಸೇವಿಸುತ್ತಾ, ತನ್ನನ್ನೇ ಮರೆತು ಬಿಡುತ್ತವೆ. ಮೀನುಗಳು ಗಾಳದ ತುದಿಯಲ್ಲಿರುವ ಆಹಾರಕ್ಕೆ ಮರುಳಾಗಿ ಬಂದು ಸಾಯುತ್ತವೆ. ಹಾಗಾದರೆ ಜಿಂಕೆಗಳು ಕಿವಿಗಳಿಂದ, ಆನೆಗಳು ಚರ್ಮದಿಂದ ಚಿಟ್ಟೆಗಳು ಕಣ್ಣುಗಳಿಂದ, ಭ್ರಂಗವು ಮೂಗಿನಿಂದ ಮತ್ತು ಮೀನುಗಳು ಕೇವಲ ಬಾಯಿಯಿಂದ ಸಾಯುತ್ತವೆ. ವಿನಃ ಬೇರೆ ಇಂದ್ರಿಯಗಳಿಂದಲ್ಲ. ಮನುಷ್ಯನು ಐದೂ ಇಂದ್ರಿಯಗಳಿಂದ ಸಾಯುತ್ತಾನೆ. ಆದುದರಿಂದ ಧೃತರಾಷ್ಟ್ರ ಈ ಐದೂ ಇಂದ್ರಿಯಗಳನ್ನು ನಿಗ್ರಹ ಮಾಡು. ವ್ಯಕ್ತಿಗಳು ಹಾಳಾಗುವುದು ಇಂದ್ರಿಯಗಳಿಂದ. ಇದನ್ನು ನಿಗ್ರಹ ಮಾಡುವುದೆಂದರೆ, ಅವುಗಳು ಚೆನ್ನಾಗಿದ್ದು ನಮ್ಮ ಹಿಡಿತದಲ್ಲಿರಬೇಕು. ಈ ಹಿಡಿತ ಸಾಧ್ಯವಾಗುವುದು ನಮಗೆ ಜೀವನದಲ್ಲಿ ಜವಾಬ್ದಾರಿಗಳು ಬಂದಾಗ.

ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ, ಒಬ್ಬ ತಾನು ದಾರಿ ಬದಿಯಲ್ಲಿ ಸ್ವಾದಿಷ್ಟವಾದ, ಪಂಚೇಂದ್ರಿಯಗಳಿಗೆ ಪ್ರಿಯವಾದ ವಿವಿಧ ರೀತಿಯ ಗುಣಗಳುಳ್ಳ ತಿಂಡಿ ತೀರ್ಥಗಳನ್ನು ಮನೆಯಲ್ಲಿ ತಯಾರಿಸಿ ಮಾರಲು ಹೊರಟಿದ್ದಾನೆ. ಸ್ವಲ್ಪ ಸಮಯದ ನಂತರ ತನಗೆ ಹಸಿವೆಯಾದರೆ ಆ ತಿಂಡಿಯನ್ನು ತಿನ್ನುವನೆ? ಯಾವುದೇ ರೀತಿಯಾದ ಕಾಯಿಲೆ ಇರದಿದ್ದರೂ, ತಿಂಡಿಯು ತನ್ನ ಹಿಡಿತದಲ್ಲಿದ್ದರೂ ಇಂದ್ರಿಯನಿಗ್ರಹದಿಂದ, ಆ ತಿಂಡಿಯನ್ನು ತಿನ್ನಲಾರ. ಈ ಇಂದ್ರಿಯನಿಗ್ರಹ ಅವನಿಗೆ ತನ್ನ ಮೇಲಿರುವ ಜವಾಬ್ದಾರಿಯ ಸಲುವಾಗಿ ಬಂದಿತು. ಏನು ಜವಾಬ್ದಾರಿ?ಈ ತಿಂಡಿಯನ್ನು ತಾನೇ ಸ್ವಯಂ ತಿಂದರೆ, ನಾಳೆ ಅವನು ದಿವಾಳಿಯಾಗುವ ಸಾಧ್ಯತೆಗಳಿರಬಹುದು. ಅದೇ ರೀತಿಯಲ್ಲಿ ಎಲ್ಲಾ ವಸ್ತುಗಳು ನಮ್ಮ ಅಕ್ಕಪಕ್ಕದಲ್ಲಿದ್ದರೂ ಅವನ್ನೆಲ್ಲ ತಾನು ಉಪಯೋಗಿಸಿದರೆ, ನಾಳೆ ಈ ಸಂಸಾರದಲ್ಲಿ ದಿವಾಳಿಯಾಗಬೇಕಾಗುತ್ತದೆ. ದಿವಾಳಿಯಾಗುವುದು ಎಂದರೂ ನರಕಕ್ಕೆ ಹೋಗುವುದು ಎಂದರೂ ಒಂದೇ ಅರ್ಥ. ತಾನು ಹಾಳಾಗುತ್ತೇನೆ ಎಂಬ ಪ್ರಜ್ಞೆ ಬಂದಿತೆಂದಾದರೆ, ಪಂಚೇಂದ್ರಿಯಗಳಿಗೆ ಪ್ರಿಯವಾದ ವಸ್ತುಗಳಲ್ಲಿ ವೈರಾಗ್ಯ ತಾಳುತ್ತೇವೆ. ಧೃತರಾಷ್ಟ್ರನೇ , ಇದನ್ನು ಇಂದ್ರಿಯನಿಗ್ರಹ ಎನ್ನುತ್ತಾರೆ. ಇಂಥ ಇಂದ್ರಿಯನಿಗ್ರಹವನ್ನು ನಿನ್ನ ಜೀವನದಲ್ಲಿ ಅಳವಡಿಸಿಕೋ.

---

(1ನೇ ಪುಟದಿಂದ...)

ಮಾಡಬೇಡ. ಯಾಕೆಂದರೆ ಸಕಲ ವಿಷಯವಸ್ತುಗಳಲ್ಲಿಯೂ ಗುಣಕ್ಕಿಂತ ದೋಷವೇ ಅಧಿಕವಾಗಿದೆ. ಇದರಿಂದಾಗಿಯೇ ಆ ವಸ್ತುಗಳಿಂದ ಆಗುವ ಸುಖಕ್ಕಿಂತ ದುಃಖವೇ ಅಧಿಕ. ಅಶಾಶ್ವತವಾದ ಈ ವಸ್ತುಗಳ ಸಂಸರ್ಗದಿಂದ ನಾವು ಕೆಡುವ ಸಂಭವವಿದೆ. ಬಂಧುಗಳು, ಹೆಂಡತಿ, ಮಕ್ಕಳು ಇವರೆಲ್ಲರೂ ಭಗವಂತನ ಪೂಜೆಗೆ ಅನುಕೂಲವಾಗಿದ್ದರೆ ನಾವು ಅವರನ್ನು ಅನುಸರಿಸಬೇಕು. ಒಂದು ವೇಳೆ ನಾವು ಮಾಡತಕ್ಕ ಧರ್ಮಕ್ಕೆ ಭಗವತ್ಪೂಜಾ ಕೈಂಕರ್ಯಗಳಿಗೆ ವಿರೋಧಿಗಳಾಗಿದ್ದರೆ ಅವರಲ್ಲಿ ಅಭಿಮಾನ ತ್ಯಾಗಮಾಡಿ ಪರಿತ್ಯಾಗ ಮಾಡಬೇಕು. ಅವರ ಪೋಷಣೆಗಾಗಿ ನಾವು ವೃಥಾ ಆಯಾಸಪಡಬಾರದು. ಈ ರೀತಿಯಾಗಿ ವಿಚಾರವನ್ನು ಮಾಡಿ ವಸ್ತುಗಳಲ್ಲಿರತಕ್ಕ ಪ್ರೇಮವೆಂಬ ಅಭಿಮಾನವನ್ನು ಬಿಡು. ಪ್ರಕೃತ ಭಗವದಾರಾಧನಾ ರೂಪವಾಗಿ ಅವಶ್ಯ ಕರ್ತವ್ಯವಾದ, ದುಷ್ಟನಿಗ್ರಹರೂಪವಾದ ಯುದ್ಧವೆಂಬ ಭಗವದ್ಪೂಜೆಗೆ ನೀನು ಮಾಡುವ ಬಂಧುಪ್ರೇಮವು ಅತ್ಯಂತ ವಿರೋಧಿಯಾದುದರಿಂದ ಬಂಧುಗಳ ಮೇಲಿನ ಅಭಿಮಾನವನ್ನು ತ್ಯಾಗ ಮಾಡು. ನೀನು ನಿನ್ನ ಸ್ವಧರ್ಮಾನುಷ್ಠಾನವನ್ನು ಮಾಡು ಎಂದು ಅರ್ಜುನನಿಗೆ ಶ್ರೀಕೃಷ್ಣನು ಉಪದೇಶವನ್ನು ಮಾಡಿದನು.

★

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಸಾಮ ಎಂದರೆ ಸಮಾನ. ಎಲ್ಲಾ ಕಡೆ ಇರುವ ಭಗವಂತ ಸಮಾನನಾಗಿದ್ದಾನೆ. ನಾಯಿಯಲ್ಲಿರುವ ಭಗವಂತ ನೀಚ ಅಲ್ಲ. ಆನೆಯಲ್ಲಿರುವ ಭಗವಂತ ದೊಡ್ಡವ ಅಲ್ಲ. ಪಂಡಿತರಲ್ಲಿ ಇರುವ ಭಗವಂತ ಶ್ರೇಷ್ಠ ಅಲ್ಲ. ಇರುವೆಯಲ್ಲಿರುವ ಭಗವಂತ ಚಿಕ್ಕವನಲ್ಲ. ಅಗ್ನಿಗೆ ಮಲ ಹಾಕಿದರೂ ಸುಡುತ್ತೆ. ತುಪ್ಪ ಹಾಕಿದರೂ ಸುಡುತ್ತೆ. ಅಗ್ನಿ ಯಾವಾಗಲೂ ಒಂದೇ ರೀತಿ ಇರುತ್ತದೆ. ಹಾಗೆಯೇ ಅವನು ಸಮಾನನಾಗಿದ್ದಾನೆ. ಸಂತಾನಃ ಎಂದರೆ ಸಂತತಃ ಎಂದು ಅರ್ಥ. ಎಲ್ಲಾ ಕಡೆ ತುಂಬಿರುವವ ಎಂದು ಅರ್ಥ. ಇದು ಕೇವಲ ಭಗವಂತ ಆಗಲು ಸಾಧ್ಯ. ಈ ರೀತಿಯಾಗಿ ತಿಳಿದುಕೊಳ್ಳುವುದೇ ನಿಜವಾಗಿ ಶೀಕ್ಷಾ ಶಾಸ್ತ್ರವನ್ನು ತಿಳಿದಂತೆ ಆಗುತ್ತದೆ. ಹೀಗೆ ಹೇಳಿ ಉಪಸಂಹಾರ ಮಾಡುತ್ತಾರೆ. **'ಇತ್ಯುಕ್ತಃ ಶೀಕ್ಷಾಧ್ಯಾಯಃ'** ಎಂದು ಹೇಳುತ್ತಾರೆ. ಇಲ್ಲಿಗೆ ಒಂದು ಅಧ್ಯಾಯ ಮುಗಿಯಿತು. ಇದು ಒಂದು ಅನುವಾಕ. ಹನ್ನೊಂದು ಶಬ್ದಗಳ ಅನುವಾಕ ಇದು. ಕೇವಲ ಹನ್ನೊಂದು ಶಬ್ದಗಳ ಈ ಅನುವಾಕದಲ್ಲಿ ಎಷ್ಟು ಅರ್ಥವನ್ನು ಅಡಗಿಸಿದ್ದಾರೆ ಎಂಬುದು ನೋಡಿದಾಗ ಯಾರಿಗೂ ಆಶ್ಚರ್ಯ ಆಗದೆ ಇರದು. ಶೀಕ್ಷಾ ರೂಪದ ಆರು ನುಡಿಗಳು ಏನನ್ನು ಹೇಳುತ್ತವೆ ಎಂಬುವದನ್ನು ಇಷ್ಟರವರೆಗೆ ಸ್ಥೂಲರೂಪದಿಂದ ನೋಡಿಯಾಯಿತು.

ಆರು ನುಡಿಗಳಾದ ವರ್ಣ, ಸ್ವರ, ಮಾತ್ರೆ, ಬಲಂ, ಸಾಮ, ಸಂತಾನಗಳು ಭಗವಂತನನ್ನೇ ಹೇಳುತ್ತವೆ. ಇವು ಭಗವಂತನ ನಾಮಧೇಯಗಳು. ಇವು ನಾರಾಯಣನ ಸ್ವರೂಪಗಳು. ವರ್ಣ ಶಬ್ದವಾಚ್ಯನಾಗಿ ಭಗವಂತ ತುಂಬಿಕೊಂಡಿದ್ದಾನೆ.ಸ್ವರ ಶಬ್ದವಾಚ್ಯನಾಗಿ ಭಗವಂತ ತುಂಬಿಕೊಂಡಿದ್ದಾನೆ. ಮಾತ್ರೆ ಶಬ್ದವಾಚ್ಯನಾಗಿ ಭಗವಂತ ತುಂಬಿಕೊಂಡಿದ್ದಾನೆ. ಹೀಗೆ ಎಲ್ಲದರ ಶಬ್ದವಾಚ್ಯ ಅವನು. ಈ ಆರರಲ್ಲೂ ಭಗವಂತ ತುಂಬಿಕೊಂಡಿದ್ದಾನೆ. ಇಷ್ಟೇ ಅಲ್ಲ ಶೀಕ್ಷಾಶಾಸ್ತ್ರದ ಆರು ನುಡಿಗಳಿಗೆ ಪ್ರತ್ಯೇಕವಾದ ನಾಲ್ಕು ಮುಖಗಳಿವೆ. ವರ್ಣ ಚತುರ್ಮುಖ ಭಗವಂತನನ್ನು ಹೇಳುತ್ತದೆ. ಸ್ವರ ಭಗವಂತನ ನಾಲ್ಕು ರೂಪಗಳನ್ನು ಹೇಳುತ್ತದೆ. ಮಾತ್ರೆ ಭಗವಂತನ ನಾಲ್ಕು ರೂಪಗಳನ್ನು ಹೇಳುತ್ತದೆ. ಎಲ್ಲದರಲ್ಲೂ ಭಗವಂತ ಚತುರ್ಮೂರ್ತಿಯಾಗಿ ತುಂಬಿದ್ದಾನೆ.

ವರ್ಣದಲ್ಲಿ ನಾಲ್ಕು ಮುಖಗಳಿವೆ. ಸ್ವರ, ಸ್ಪರ್ಷ, ಅಂತಸ್ತ ಹಾಗೂ ಊಷ್ಮಗಳು 'ಅಕಾರ'ದಿಂದ 'ಅಃಕಾರ'ದವರೆಗೆ ಹದಿನಾರು ಸ್ವರಗಳು, ಕವರ್ಗ ಚವರ್ಗ ಹೀಗೆ 'ಮಕಾರ' ದವರೆಗೆ ಇಪ್ಪತ್ತೈದು ಸ್ಪರ್ಷಗಳು. ಯ ರ ಲ ವ ಕಾರಗಳು ಅಂತಸ್ತಗಳು. ಶ ಷ ಸ ಹ ಕಾರಗಳು ಊಷ್ಮಗಳು. ಇವು ಭಗವಂತನ ನಾಲ್ಕು ರೂಪಗಳನ್ನು ಹೇಳುತ್ತವೆ. ಸ್ವರಗಳು ನಾರಾಯಣನ ವಾಸುದೇವ ರೂಪವನ್ನು ಹೇಳಿದರೆ ಸ್ಪರ್ಷಗಳು ನಾರಾಯಣನ ಸಂಕರ್ಷಣ ರೂಪವನ್ನು ಹೇಳುತ್ತವೆ. ಅಂತಸ್ತಗಳು ಪ್ರದ್ಯುಮ್ನನನ್ನು ಹಾಗೂ ಊಷ್ಮಗಳು ಅನಿರುದ್ಧನನ್ನು ಹೇಳುತ್ತವೆ. ಇವನ್ನು ಶಾಸ್ತ್ರೀಯವಾಗಿ ಹೇಳುವುದಾದರೆ ವರ್ಣಗಳು ನಾರಾಯಣ ವಾಸುದೇವ, ನಾರಾಯಣ ಸಂಕರ್ಷಣ, ನಾರಾಯಣ ಪ್ರದ್ಯುಮ್ನ, ನಾರಾಯಣ ಅನಿರುದ್ಧ ಎಂಬ ಭಗವಂತನ ರೂಪವನ್ನು ಹೇಳುತ್ತವೆ. ಇದೇ ರೀತಿ ಸ್ವರ ಸಹ ನಾಲ್ಕು ವಿಧ. ಉದಾತ್ತ, ಅನುದಾತ್ತ, ಸ್ವರಿತ, ಪ್ರಚಯ. ಉದಾತ್ತ ನಾರಾಯಣ ವಾಸುದೇವನನ್ನು ಹೇಳಿದರೆ ಅನುದಾತ್ತ ನಾರಾಯಣ ಸಂಕರ್ಷಣನನ್ನು ಹೇಳುತ್ತದೆ. ಸ್ವರಿತ, ಪ್ರಚಯಗಳು ಕ್ರಮವಾಗಿ ನಾರಾಯಣ ಪ್ರದ್ಯುಮ್ನ ಹಾಗೂ ನಾರಾಯಣ ಅನಿರುದ್ಧ ರೂಪಗಳನ್ನು ಹೇಳುತ್ತವೆ.

ಮಾತ್ರೆಗಳು ಸಹ ನಾಲ್ಕು ವಿಧ. ಒಂದು ಮಾತ್ರೆಯ ಸ್ವರಕ್ಕೆ ಹ್ರಸ್ವ ಎಂದು, ಎರಡು ಮಾತ್ರೆಯ ಸ್ವರಕ್ಕೆ ದೀರ್ಘವೆಂತಲೂ, ಮೂರು ಮಾತ್ರೆಯ ಕಾಲದಲ್ಲಿ ಹೇಳಲ್ಪಡುವ ಸ್ವರಕ್ಕೆ ಪ್ಲುತ ಎಂದು ಹೇಳುತ್ತಾರೆ. ಅಲ್ಲದೆ ಅರ್ಧ ಮಾತ್ರೆಯ ಸ್ವರಗಳಿವೆ. ಶಬ್ದವಿಂಗಡನೆ ಮಾಡಿ ಹೇಳುವಾಗ ಅರ್ಧಮಾತ್ರೆಯ ಅವಧಿಯನ್ನು ಬಿಡಬೇಕು. ಪದಪಾಠ ಹೇಳುವಾಗ ಒಂದು ಮಾತ್ರೆಯ ಕಾಲಬಿಡಬೇಕು. ಹೀಗೆ ಈ ನಾಲ್ಕು ರೂಪಗಳು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಹಾಗೂ ಅನಿರುದ್ಧ ರೂಪಗಳನ್ನು ಹೇಳುತ್ತವೆ.

ಬಲಂ ಎಂದರೆ ಅಕ್ಷರದ ಉಚ್ಚಾರಣೆಗೆ ಬೇಕಾಗುವ ಪ್ರಯತ್ನ. ಇವುಗಳು ನಾಲ್ಕು ವಿಧ. ಸ್ಪೃಷ್ಟ ಅಸ್ಪೃಷ್ಟ, ಈಶತ್ಸ್ಪೃಷ್ಟ, ನೇಮಸ್ಪೃಷ್ಟ. ಸ್ವರಗಳನ್ನು ಅಸ್ಪೃಷ್ಟ ಶಬ್ದಗಳೆಂದು, ಕವರ್ಗಿಯ ಮುಂತಾದ ಸ್ಪರ್ಷಗಳನ್ನು ಸ್ಪೃಷ್ಟಶಬ್ದಗಳೆಂದೂ, ಯರಲವಗಳು ಈಶತ್ಸ್ಪೃಷ್ಟಗಳೆಂದೂ, ಶಷಸಹಗಳನ್ನು ನೇಮಸ್ಪೃಷ್ಟಗಳೆಂದೂ ಕರೆಯುತ್ತಾರೆ. ಹೀಗೆ ಕೆಲವು ಅಕ್ಷರಗಳನ್ನು ಹೇಳುವಾಗ ಯಾವುದರ ಸ್ಪರ್ಶವು ಅಗತ್ಯ ಇಲ್ಲದೆ, ಇನ್ನು ಕೆಲವನ್ನು ಸ್ಪರ್ಶಿಸಿಯು ಮತ್ತೆ ಕೆಲವನ್ನು ಅರ್ಧ ಸ್ಪರ್ಶಿಸಿ ಉಳಿದ ಕೆಲವನ್ನು ಹೌದೋ ಅಲ್ಲವೋ ಎಂಬಂತೆ ಸ್ಪರ್ಶಿಸಿ ಉಚ್ಚರಿಸುತ್ತೇವೆ. ಹೀಗೆ ನಾಲ್ಕು ರೀತಿಯ ಪ್ರಯತ್ನಗಳು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪಗಳನ್ನು ಹೇಳುತ್ತವೆ.

**(ಮುಂದುವರಿಯುವುದು)**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

ಐದು ತತ್ವಗಳಾದುವೊಂದ
ಕ್ಕೈದು ಕಡೆಯಲಿ ತತ್ವವಿಪ್ಪ
ತ್ತೈದು ಕೂಡಿದ ತನುವಿನಲಿ ವಂಚಿಸದೆ ನೀನಿರಲು
ಭೇದಿಸದೆ ಜೀವಾತ್ಮ ತಾ ಸಂ
ಪಾದಿಸಿದ ಸಂಚಿತ ಸುಕರ್ಮವ
ನಾದರಿಸಿ ಕೈಗೊಂಡು ರಕ್ಷಿಸು ನಮ್ಮನನವರತ ॥೬೫॥

ಮೊದಲಿಗೆ ಪಂಚ ಮಹಾಭೂತಗಳೆಂಬ ಐದು ತತ್ವಗಳಾದುವು. ಕಡೆಯಲ್ಲಿ ಒಂದಕ್ಕೆ ಐದರಂತೆ ತತ್ವಗಳು ಇಪ್ಪತ್ತೈದು ಕೂಡಿದ ಶರೀರದಲ್ಲಿ ವಂಚಿಸದೆ ಭೇದಬುದ್ಧಿಯನ್ನೂ ಮಾಡದೆ ನೀನಿರುವಾಗ ಜೀವಾತ್ಮ ಸುಕರ್ಮವನ್ನೇ ಮಾಡುತ್ತಾನೆ. ಅವನು ಸಂಪಾದಿಸಿದ ಸಂಚಿತ ಸುಕರ್ಮವನ್ನು ನೀನು ಸ್ವೀಕರಿಸಿ, ಸದಾ ನಮ್ಮನ್ನು ಕಾಪಾಡಬೇಕು.

## ಐದು ತತ್ವಗಳಾದುವು

ಈ ಶರೀರ ಉಂಟಾಗುವುದಕ್ಕೆ ಮೊದಲು ತಾಮಸಾಹಂಕಾರದಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಜಲ, ಜಲದಿಂದ ಪೃಥಿವಿ ಹೀಗೆ ಪಂಚಮಹಾಭೂತಗಳು ಉಂಟಾದುವು.

## ಒಂದಕ್ಕೈದು

ಈ ಪಂಚಭೂತಗಳಲ್ಲಿ ಪ್ರತಿಯೊಂದರ ನೂರನೆ ಒಂದು ಭಾಗ ಇತರ ಭಾಗಗಳಲ್ಲಿ ಸೇರಿಕೊಂಡಿತು. ಹೀಗಾಗಿ ಈಗ ಸಿಗುವ ಮಣ್ಣಿನಲ್ಲಿ ತೊಂಬತ್ತಾರು ಭಾಗ ಪೃಥಿವೀ ತತ್ವ. ಇನ್ನುಳಿದ ನಾಲ್ಕು, ಇತರ ನಾಲ್ಕು ಭೂತಗಳ ಭಾಗಗಳು. ಇದು ಪಂಚಭೂತಗಳ ಮೇಲನ, ಪಂಚೀಕರಣ. ವಿಷ್ಣು ರಹಸ್ಯದಲ್ಲಿ ಇದರ ವಿವರಣೆ ಬರುತ್ತದೆ. ಹೀಗೆ ಪಂಚೀಕೃತವಾದ ಪೃಥಿವೀಭೂತದಿಂದಾಗಿರುವ ಪಾರ್ಥಿವಶರೀರದಲ್ಲಿ ಕೈಕಾಲು ಮುಂತಾದ ಎಲ್ಲ ಅವಯವಗಳು ಪೃಥಿವೀಭೂತದಿಂದಲೇ ಆಗಿರುತ್ತವೆ. ಇಂದ್ರಿಯಗಳು ಜಲಭೂತದಿಂದ. ಮೈಯ ಕಾವು

ತೇಜಸ್ಸಿನಿಂದ. ಉಸಿರು ವಾಯುವಿನಿಂದ ಮತ್ತು ಶರೀರದೊಳಗೆ ಗಾಳಿ ಸಂಚಾರಕ್ಕೆ ಬೇಕಾಗುವ ಅವಕಾಶ ಆಕಾಶದಿಂದ ಆಗಿರುತ್ತವೆ. ಹೀಗೆ ಐದು ಭೂತಗಳು ಶರೀರದಲ್ಲಿ ಐದು ಭಾಗಗಳಾಗಿ ಕಾರ್ಯನಿರ್ವಹಿಸುತ್ತವೆ.

## ಕಡೆಯಲಿ ತತ್ತ್ವವಿಪ್ಪತ್ತೈದು ಕೂಡಿದ ತನುವಿನಲಿ

ಪೃಥಿವೀ ಮುಂತಾಗಿ ಒಂದೊಂದು ತತ್ವವೂ ಪಂಚೀಕರಣದಿಂದ ಐದು ತತ್ವಗಳ ಸಮೂಹವಾಗಿದ್ದು ಶರೀರಾವಯವ ಇಂದ್ರಿಯ ಮುಂತಾಗಿ ಐದು ಭಾಗವಾಗಿ ಶರೀರದಲ್ಲಿ ಕಾರ್ಯನಿರ್ವಹಿಸುವುದರಿಂದ ತತ್ತ್ವ ಇಪ್ಪತ್ತೈದು. ಒಂದು ಸಣ್ಣ ಇರುವೆಗೂ ಕೂಡ ಇಂತಹ ಇಪ್ಪತ್ತೈದು ತತ್ವಗಳಿಂದಾಗುವ ಶರೀರವನ್ನು ಶ್ರೀಹರಿ ಸೃಷ್ಟಿ ಮಾಡಿಕೊಡುತ್ತಾನೆ. ಅವನು ನಿರ್ಮಿಸಿದ ಅದ್ಭುತಯಂತ್ರ ಜೀವಿಗಳಶರೀರ.

## ವಂಚಿಸದೆ ನೀನಿರಲು ಭೇದಿಸದೆ

ಶ್ರೀಹರಿ, ಜೀವರಿಗೆ ನೀನೇನೂ ವಂಚನೆ ಮಾಡುವುದಿಲ್ಲ. ಇಲ್ಲದ್ದನ್ನು ಮಾಯೆಯಿಂದ ತೋರುವುದಿಲ್ಲ. ಅವರಿಂದ ಕರ್ಮಮಾಡಿಸುವ ಉದ್ದೇಶದಿಂದಲೇ ಸತ್ಯವಾದ ಶರೀರವನ್ನು ನಿರ್ಮಿಸಿ ಅದರೊಳಗೆ ನೀನಿರುವೆ. ಒಂದು ಇರುವೆಯ ಶರೀರದಲ್ಲಿಯೂ ನೀನಿರುವೆ. ಜೀವರ ಐಕಮತ್ಯವನ್ನು ಭೇದಿಸುವ ಒಡೆಯುವ ಉದ್ದೇಶವೂ ನಿನಗಿಲ್ಲ. ನಿನ್ನ ಸ್ವಂತ ಲಾಭಕ್ಕಾಗಿ ಆಮಿಷ ರೂಪದಿಂದಲೂ ಶರೀರವನ್ನು ನೀಡುವುದಲ್ಲ. ಕೇವಲ ಜೀವರ ಮೋಕ್ಷಸಾಧನೆಗಾಗಿ, ಅವರ ಕರ್ಮಫಲ ಭೋಗಕ್ಕಾಗಿ ನಿರ್ವಂಚನೆಯಿಂದ ಶರೀರವನ್ನು ಸೃಷ್ಟಿಮಾಡಿ ಅದರ ಸುಸ್ಥಿತಿಯನ್ನು ಕಾಪಾಡುವುದಕ್ಕಾಗಿ ಅದರೊಳಗೆ ಜೀವರಂತೆ ನೀನೂ ಇರುವೆ.

## ಸಂಚಿತಸುಕರ್ಮವನಾದರಿಸಿ ಕೈಗೊಂಡು ರಕ್ಷಿಸು

ನೀನಿತ್ತ ಈ ಸಾಧನ ಶರೀರದಲ್ಲಿ ನಾವು ಮಾಡುವ ಎಲ್ಲ ಕರ್ಮ ನಿನಗೇ ಅರ್ಪಿಸುವೆವು. ಏಕೆಂದರೆ ಅವುಗಳನ್ನು ನಮ್ಮಿಂದ ಮಾಡಿಸಿದವನೂ ನೀನೆ. ಅವು ನಿನ್ನವೇ. ಕೆರೆಯ ನೀರನು ಕೆರೆಗೆ ಚೆಲ್ಲಿ ಎಂಬಂತೆ ಸಂಚಿತವಾದ, ನಾವು ಮಾಡಿಕೂಡಿಟ್ಟಿರುವ ಸತ್‌ಕರ್ಮಗಳನ್ನು ನಿನಗೇ ಅರ್ಪಿಸುವುದು ನ್ಯಾಯ. ಅವು ನಿನಗೆ ಪ್ರಿಯವೂ ಹೌದು. ಮರಗಳು ಹೂಬಿಟ್ಟಾಗ ಅದರ ಸುಗಂಧ ಸುತ್ತಲೂ ಹರಡುತ್ತದೆ. ಹಾಗೇ ಸತ್ಕರ್ಮದ

(.......26ನೇ )

ವಿದ್ಯಾಮಾನ್ಯ ಆರಾಧನಾಪ್ರಯುಕ್ತ ವಿಶೇಷ ಲೇಖನ

# ಶ್ರೀ ವಿಷ್ಣುಸಹಸ್ರನಾಮವಾಙ್ಮಯಕ್ಕೆ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಕೊಡುಗೆ

-ಸಗ್ರಿ

ಶ್ರೀವಿದ್ಯಾಮಾನ್ಯತೀರ್ಥರ ಮೂಲಕ ಸಂದ ಉಡುಪಿ ಶ್ರೀಕೃಷ್ಣನಿಗೆ ಸುವರ್ಣರಥ, ಸುವರ್ಣತೊಟ್ಟಿಲು, ವಜ್ರಕಿರೀಟ-ಇತ್ಯಾದಿ ಕೊಡುಗೆಗಳ ವಿಷಯದಲ್ಲೂ, ಶ್ರೀವಿಶ್ವೇಶತೀರ್ಥರು-ಶ್ರೀವಿಶ್ವಪ್ರಿಯತೀರ್ಥರು-ಶ್ರೀಸುಗುಣೇಂದ್ರತೀರ್ಥರು-ಶ್ರೀವಿದ್ಯಾಧೀಶತೀರ್ಥರು, ಶ್ರೀವಿದ್ಯೇಶತೀರ್ಥರು ಮುಂತಾದ ವಿಶಿಷ್ಟ ಯತಿಗಳನ್ನು ಸಿದ್ಧಪಡಿಸಿರುವ ವಿಷಯದಲ್ಲೂ, ಪಲಿಮಾರು ಮಠಾಧಿಪತಿಗಳಾಗಿ ಉಡುಪಿ ಶ್ರೀಕೃಷ್ಣನನ್ನು ಮುಟ್ಟಿ ಆರಾಧಿಸುವಂತಹ ವಿಶಿಷ್ಟ ಸಾಧನೆಗಳ ವಿಷಯದಲ್ಲೂ ಅವರ ವೈಯಕ್ತಿಕ ಪ್ರಯತ್ನಕ್ಕಿಂತಲೂ ಹರಿಗುರುಗಳ ಸಂಕಲ್ಪ, ಅನುಗ್ರಹದ ಪಾತ್ರವೇ ಹೇಗೆ ಎದ್ದು ಕಾಣುವುದೋ ಹಾಗೆಯೇ ಶ್ರೀವಿಷ್ಣುಸಹಸ್ರನಾಮವಾಙ್ಮಯಕ್ಕೆ ಅವರಿಂದ ಸಂದ ಕೊಡುಗೆಯ ವಿಷಯದಲ್ಲೂ ಶ್ರೀವಿಷ್ಣುಸಹಸ್ರನಾಮ ಪ್ರತಿಪಾದ್ಯ ಸಾಸಿರನಾಮದೊಡೆಯನ ಅನುಗ್ರಹ, ಪ್ರೇರಣೆಗಳ ಒತ್ತು ಎದ್ದು ಕಾಣಿಸುವುದು.

## ಮೂರು ಮುಖದ ಕೊಡುಗೆಗಳು

ಶ್ರೀಹರಿಗುರುಗಳು ಶ್ರೀವಿದ್ಯಾಮಾನ್ಯತೀರ್ಥರ ಮೂಲಕ ವಿಷ್ಣುಸಹಸ್ರನಾಮವಾಙ್ಮಯಕ್ಕೆ ಮೂರು ಮುಖದ ಕೊಡುಗೆಗಳು ಸಲ್ಲುವಂತೆ ಅನುಗ್ರಹಿಸಿರುವರು.

## ಪ್ರಕಟಣೆಯ ಕೊಡುಗೆ

ಶ್ರೀಪಾದರ ಎರಡನೇ ಪರ್ಯಾಯಾವಧಿಯಲ್ಲಿ ವಿದ್ವಾಂಸರ ವರ್ಗವೊಂದನ್ನು ನಿಯೋಜಿಸಿ ಅವರ ಮೂಲಕ ಶ್ರೀವಿಷ್ಣುಸಹಸ್ರನಾಮಕ್ಕೆ ಶ್ರೀಮಧ್ವಗುರುಗಳ ಸರ್ವಮೂಲಗ್ರಂಥಗಳ ಆಧಾರದಲ್ಲಿ ವಿಸ್ತೃತವಾದ ಕನ್ನಡವ್ಯಾಖ್ಯಾನ ರೂಪುಗೊಳ್ಳುವಂತೆ ಮಾಡಲಾಗಿದೆ. ಶ್ರೀಪಾದರ ಮಾರ್ಗದರ್ಶನದಡಿ ಐನೂರಕ್ಕಿಂತಲೂ ಅಧಿಕಪುಟಗಳನ್ನೊಳಗೊಂಡ ನಾಲ್ಕು ಸಂಪುಟಗಳಲ್ಲಿ ಶ್ರೀವಿಷ್ಣುಸಹಸ್ರನಾಮಕ್ಕೆ ಕನ್ನಡದ ವ್ಯಾಖ್ಯಾನ ರಚಿತವಾಗಿ ಉಡುಪಿ ಶ್ರೀಕೃಷ್ಣಮುಖ್ಯಪ್ರಾಣರಿಗೆ ಸಮರ್ಪಿತವಾಗುವಂತಾಯಿತು.

ಇದರಿಂದಾಗಿ ವಿಷ್ಣುಸಹಸ್ರನಾಮದ ಪ್ರತಿಯೊಂದು ನಾಮವೂ ಕನಿಷ್ಠ ನೂರು ಅರ್ಥಗಳಲ್ಲಿ ತೆರೆದುಕೊಳ್ಳಬಲ್ಲವೆಂಬ ಶ್ರೀಮಧ್ವರ ಸಂದೇಶ ಸಂಭಾವಿತ ಎಂದು ಸ್ಪಷ್ಟವಾಯಿತಲ್ಲದೆ, ಶ್ರೀವಿಷ್ಣುಸಹಸ್ರನಾಮ ಬರೇ ಸ್ತೋತ್ರವೆನಿಸದೆ ಶಾಸ್ತ್ರೀಯ ಪ್ರಮೇಯಗಳನ್ನೆಲ್ಲ ಬಸಿರಲ್ಲಿ ಸೇರಿಸಿಕೊಂಡಿರುವ ದೊಡ್ಡ ಶಾಸ್ತ್ರೀಯ ಗ್ರಂಥವಾಗಿಯೂ ಮೆರೆಯಬಲ್ಲದೆಂದೂ ಸ್ಪಷ್ಟವಾಯಿತು.

## ಜಿಜ್ಞಾಸಾರಚನೆಯ ಕೊಡುಗೆ

ಹೀಗೆ ಶ್ರೀಪಾದರು ವಿದ್ವಾಂಸರ ಮೂಲಕ ವಿಷ್ಣುಸಹಸ್ರನಾಮಕ್ಕೆ ವ್ಯಾಖ್ಯಾನವನ್ನು ರಚಿಸಿರುವುದಷ್ಟೇ ಅಲ್ಲದೆ, ಪರ್ಯಾಯದ ಆ ಗೌಜಿ ಗಲಾಟೆಯಲ್ಲೂ ವಿಷ್ಣುಸಹಸ್ರನಾಮದ ಪ್ರತಿಯೊಂದು ನಾಮದ ಅರ್ಥಕ್ಕೆ ಸಂಬಂಧಿಸಿದಂತೆ ಪ್ರಶ್ನೋತ್ತರ ರೂಪದಲ್ಲಿ ಜಿಜ್ಞಾಸೆಯನ್ನು ಬರೆದಿರುವರು. ಹೆಚ್ಚಾಗಿ ಸರ್ವಮೂಲಗ್ರಂಥಗಳ ಪ್ರಮೇಯದ ಆಧಾರದಲ್ಲಿ ನಡೆಸಲಾದ ಈ ಜಿಜ್ಞಾಸೆಯಿಂದಾಗಿ ಆಯಾ ವಿಷ್ಣುಸಹಸ್ರನಾಮವನ್ನು ಅರ್ಥೈಸಿಕೊಳ್ಳುವಲ್ಲಿ ಸರ್ವಮೂಲದ ಪ್ರಮೇಯಗಳ ಸೌರಭವನ್ನು ಹಚ್ಚಿಕೊಟ್ಟಂತಾಗಿದೆ.

## ಪ್ರಮೇಯಗಳ ಕುರಿತಾದ ಕೊಡುಗೆ

ವಿಷ್ಣುಸಹಸ್ರನಾಮದ ಸಂಪಾದಕವರ್ಗಕ್ಕೆ ವಿಷ್ಣುಸಹಸ್ರನಾಮಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುವಾಗ ಕೆಲವು ವಿಶಿಷ್ಟ ಪ್ರಮೇಯಗಳ ಬಗ್ಗೆ ಬೆಳಕು ಚೆಲ್ಲಲ್ಪಟ್ಟಂತಾಗಿದೆ

## ಸಾವಿರ ರೂಪಗಳು ವಿಷ್ಣುಸಹಸ್ರನಾಮ ಪ್ರತಿಪಾದ್ಯಗಳು

ವಿಷ್ಣುಸಹಸ್ರನಾಮದ ಸಾವಿರನಾಮಗಳಿಂದ ಪ್ರತಿಪಾದ್ಯಗಳಾದವು ಭಗವಂತನ ಸಾವಿರ ರೂಪಗಳು. ಆ ಸಾವಿರರೂಪಗಳ ವ್ಯೂಹ ಪ್ರತ್ಯೇಕವಾಗಿಯೇ ಇದೆ.

ಈ ವಿಶಿಷ್ಟವಾದ ಮಾರ್ಗದರ್ಶನದಿಂದಾಗಿ ವಿಷ್ಣುಸಹಸ್ರನಾಮಕ್ಕೆ ಸಂಬಂಧಿಸುವ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕಿದಂತಾಗಿದೆ.

1) ವಿಷ್ಣುಸಹಸ್ರನಾಮ ಎಂದು ಪ್ರಸಿದ್ಧವಾಗಿರುವ ಸ್ತೋತ್ರ ವಿಷ್ಣುನಾಮದಿಂದ ಪ್ರಾರಂಭವಾಗುವ ಬದಲು ವಿಶ್ವನಾಮದಿಂದ ಯಾಕೆ ಪ್ರಾರಂಭವಾಗುತ್ತಿದೆ? ಎಂಬ ಸಂದೇಹಕ್ಕೆ ವಿಷ್ಣುಸಹಸ್ರನಾಮ ಪ್ರತಿಪಾದ್ಯ ಭಗವದ್ರೂಪಗಳ ವ್ಯೂಹರೂಪಗಳ ಅಭಿವ್ಯಕ್ತಿಯಾಗುವ ಕ್ರಮಕ್ಕನುಗುಣವಾಗಿ ವಿಶ್ವನಾಮಕ ರೂಪದಿಂದಲೇ ಪ್ರಾರಂಭವಾಗುವುದರಿಂದ ಆ ನಾಮವೇ ಸ್ತೋತ್ರದ ಆದಿಯಲ್ಲಿ

(

ಪಠಿತವಾಗಿದೆ. ಭಗವಂತನ ದಶಾವತಾರದ ವ್ಯೂಹ ಮತ್ಸ್ಯದಿಂದಲೇ ಹೇಗೋ ಹಾಗೆ. ಆ ಸಾವಿರ ರೂಪಗಳ ವ್ಯೂಹ ಶ್ರೀವಿಷ್ಣುವಿಗೆ ಸೇರಿದ್ದೆಂದು ಸ್ಪಷ್ಟವಾಗಲೆಂಬ ದೃಷ್ಟಿಯಿಂದಷ್ಟೇ ಅದನ್ನು ವಿಶ್ವಸಹಸ್ರನಾಮ ಎನ್ನದೆ ವಿಷ್ಣುಸಹಸ್ರನಾಮ ಎಂದು ವ್ಯವಹರಿಸುವ ವಾಡಿಕೆ ಬಂದಿದೆ.

2) ಸಾವಿರ ರೂಪಗಳ ಆ ವ್ಯೂಹ ರೂಪಗಳ ಅಭಿವ್ಯಕ್ತಿಗನುಗುಣವಾಗಿ **'ಸರ್ವಪ್ರಹರಣಾಯುಧ'**– ಎಂಬ ಹೆಸರಿನ ರೂಪದೊಂದಿಗೆ ಕೊನೆಗೊಳ್ಳುವುದರಿಂದ ಸರ್ವಪ್ರಹರಣಾಯುಧ ನಾಮವೇ ವಿಷ್ಣುಸಹಸ್ರನಾಮದ ಕೊನೆಯ ನಾಮವೆನಿಸಿದೆ.

3) ಸಾವಿರ ಭಗವದ್ರೂಪಗಳ ಅಭಿವ್ಯಕ್ತಿಯ ಕ್ರಮಕ್ಕನುಗುಣವಾಗಿಯೇ ಆಯಾ ನಾಮಗಳ ಸಂಯೋಜನೆ ನಡೆದಿರುವುದರಿಂದ ಆ ನಾಮ ಆದ ಮೇಲೆ ಈ ನಾಮ ಯಾಕೆ? ಇತ್ಯಾದಿ ಸಂದೇಹಕ್ಕೆ ಅವಕಾಶವಿಲ್ಲ.

4) ದಶಾವತಾರಗಳ ವ್ಯೂಹದಲ್ಲಿ ರಾಮಹೆಸರಿನ ರೂಪಗಳು ದಾಶರಥಿ ರಾಮ ಹಾಗೂ ಪರಶು ರಾಮ– ಎಂದು ಎರಡು ಹೇಗೆ ಇವೆಯೋ ಅಂತೆಯೇ ವಿಷ್ಣುಸಹಸ್ರನಾಮದಲ್ಲೂ ಸಮಾನ ಹೆಸರಿನ ಅನೇಕ ರೂಪಗಳು ಅಭಿವ್ಯಕ್ತಗಳಾಗಿದ್ದು ಆ ರೂಪಗಳ ಹೆಸರುಗಳನ್ನು ಕ್ರೋಢೀಕರಿಸಲಾಗಿರುವ ಪ್ರಯುಕ್ತ ಪೌನರುಕ್ತ್ಯದೋಷಕ್ಕೆ ಅವಕಾಶವಿಲ್ಲ.

5) ಭಗವಂತ ವಿಶಿಷ್ಟಗಳಾದ ಸಾವಿರರೂಪಗಳಿಗೆ ಸಂಬಂಧಿಸಿರುವ ಸಾವಿರ ಹೆಸರುಗಳ ಸಂಗ್ರಹರೂಪವೇ ವಿಷ್ಣುಸಹಸ್ರನಾಮ ಸ್ತೋತ್ರವಾದುದರಿಂದ ಅದರಲ್ಲಿ ಸಾವಿರ ಹೆಸರುಗಳು ಸೇರಿಕೊಂಡಿವೆಯೇ ಹೊರತು ಸಾವಿರಕ್ಕಿಂತಲೂ ಅಧಿಕ ಹೆಸರುಗಳೂ ಇವೆ ಎಂದು ಭಾವಿಸಲು ಅವಕಾಶವಿಲ್ಲ.

## ಶನಿದೋಷ ನಿವಾರಣೆ

ಹೀಗೆ ವಿಷ್ಣುಸಹಸ್ರನಾಮ ಪ್ರತಿಪಾದ್ಯರೂಪಗಳ ಬಗ್ಗೆ ಸ್ಪಷ್ಟೀಕರಣವನ್ನು ನೀಡಿ ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗುವಂತೆ ಮಾಡಿದ್ದ ಶ್ರೀಪಾದರು ಒಂದು ವಿಷ್ಣುಸಹಸ್ರನಾಮದ ಸಂಪುಟದ ಮುನ್ನುಡಿಯಲ್ಲಿ ವಿಷ್ಣುಸಹಸ್ರನಾಮಪಠನೆ ಶನಿದೋಷನಿವಾರಣೆಗೆ ತುಂಬ ಉಪಯುಕ್ತವೆಂದು ಯುಕ್ತಿಸಹಿತವಾಗಿ ಸಮರ್ಥಿಸಿದ್ದರು. ಶನಿಯ ದೇವತೆ ವಿಷ್ಣು ಆಗಿರುವುದರಿಂದ ಅಂತಹ ವಿಷ್ಣುವಿನ ಕುರಿತಾದ ವಿಷ್ಣುಸಹಸ್ರನಾಮದ

ಪಠಣಾದಿಗಳು ಶನಿಸೂಚಿತ ದೋಷಗಳನ್ನು ಪರಿಹರಿಸಬಲ್ಲವೆಂದು ಶ್ರೀಪಾದರ ಉಪಪಾದನೆ.

## ಸ್ತ್ರೀಯರೂ ಪಠಿಸಬಹುದು

ಮತ್ತೊಂದು ಸಂಪುಟದ ಮುನ್ನುಡಿಯಲ್ಲಿ ವಿಷ್ಣುಸಹಸ್ರನಾಮವನ್ನು ಉತ್ತಮಸ್ತ್ರೀಯರೂ ಖಂಡಿತಾ ಪಠಿಸಬೇಕು ಎಂದು ಪ್ರಮಾಣಪುರಸ್ಸರವಾಗಿ ಸಮರ್ಥಿಸಿದ್ದ ಶ್ರೀಪಾದರಿಂದ ಸ್ತ್ರೀಯರಿಗೆ ವಿಷ್ಣುಸಹಸ್ರನಾಮವನ್ನು ವಿನಿಯೋಗಿಸಿಕೊಳ್ಳಲು ಅನುಕೂಲ ಮಾಡಿಕೊಟ್ಟಂತಾಗಿದೆ.

## ಹತ್ತುಕೋಟಿ ಎಂಭತ್ತು ಲಕ್ಷಗುಣಗಾನದ ಮಹಾಪುಣ್ಯ

ಇನ್ನೊಂದು ಸಂಪುಟದ ಮುನ್ನುಡಿಯಲ್ಲಿ–ಕನಿಷ್ಠ ನೂರು ಅರ್ಥಗಳಲ್ಲಿ ತೆರೆದುಕೊಳ್ಳುವ ವಿಷ್ಣುಸಹಸ್ರನಾಮದ ಒಂದೊಂದು ನಾಮವೂ ಭಗವಂತನ ನೂರು ಗುಣಗಳನ್ನು ಸಾರುತ್ತಿದ್ದು, ಅಂತಹ ಸಹಸ್ರನಾಮಗಳನ್ನು ಪಠಿಸಿದರೆ ಲಕ್ಷಗುಣಗಳನ್ನು ವರ್ಣಿಸಿದಂತಾಗುವುದು. ಪ್ರತಿದಿನ ತ್ರಿಕಾಲದಲ್ಲಿ ಸಹಸ್ರನಾಮ ಪಠನ ಮಾಡುತ್ತ ಶ್ರೀವಿಷ್ಣುವಿನ ಲಕ್ಷಗುಣಗಳನ್ನು ಮೂರು ಬಾರಿ ವರ್ಣನೆ ಮಾಡುತ್ತೇವೆಂದು ಭಾವಿಸಿ ಸಂಕಲ್ಪ ಕೃಷ್ಣಾರ್ಪಣಗಳನ್ನು ಮಾಡಿದರೆ ಒಂದು ವರ್ಷ ಮುಗಿಯುವಾಗ ಹತ್ತುಕೋಟಿಯ ಮೇಲೆ ಎಂಭತ್ತುಲಕ್ಷಗುಣಗಳ ಗಾನಮಾಡಿದ ಮಹಾಪುಣ್ಯ ಬರುವುದೆಂದು ಸ್ಪಷ್ಟಪಡಿಸಿರುವ ಶ್ರೀಪಾದರಿಂದ ಸಾಧಕರಿಗೆ ವಿಷ್ಣುಸಹಸ್ರನಾಮದ ಮಾಧ್ಯಮದಲ್ಲಿ ಸಾಧನಾನುಷ್ಠಾನಕ್ಕೆ ಸ್ಫೂರ್ತಿ ದೊರೆತಂತಾಗಿದೆ.

## ಬೃಹತೀ ಸಹಸ್ರದ ಮಂತ್ರಗಳ ಅರ್ಥದ ಚಿಂತನೆ

ಈ ರೀತಿಯಾಗಿ ವಿಷ್ಣುಸಹಸ್ರನಾಮ ವಾಙ್ಮಯಕ್ಕೆ ಮಹತ್ತ್ವದ ಕೊಡುಗೆ ಸಲ್ಲಿಸಿರುವ ಶ್ರೀವಿದ್ಯಾಮಾನ್ಯತೀರ್ಥರ ಶಿಷ್ಯರಾದ ಶ್ರೀವಿದ್ಯಾಧೀಶತೀರ್ಥರು ಗುರುಗಳು ಪ್ರಕಟಿಸಿರುವ ವಿಷ್ಣುಸಹಸ್ರನಾಮದ ಕೃತಿಯನ್ನು ಪ್ರತಿಯೊಂದು ನಾಮಕ್ಕೆ ಸಂಬಂಧಿಸಿದ ಬೃಹತೀಸಹಸ್ರದ ಮಂತ್ರಾರ್ಥದ ಚಿಂತನೆಯೊಂದಿಗೆ ಮರುಪ್ರಕಟಣೆ ಮಾಡಬೇಕೆಂದು ಸಂಕಲ್ಪಿಸಿ ಈಗಾಗಲೇ ಅದನ್ನು ಕಾರ್ಯಗತಗೊಳಿಸುತ್ತಲಿರುವುದರಲ್ಲೂ ಶ್ರೀಪಾದರ ಅನುಗ್ರಹದ್ದೇ ದೊಡ್ಡ ಪಾತ್ರ.

★

# ಆಸ್ತಿಕರು ಅಭಯಪ್ರದರಾಗಬೇಕು

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ತಂದೆಯ ಮರಣದ ರೀತಿಯನ್ನು ಮಂತ್ರಿಗಳಿಂದ ತಿಳಿದ ಜನಮೇಜಯ ಕೋಪದಿಂದ ಕುದ್ದು ಹೋದ. ಸರ್ಪಕುಲವನ್ನೇ ಸಂಹರಿಸುವ ಕಿಚ್ಚು ಅವನ ಮನಸ್ಸಿನಲ್ಲಿ ಹೊತ್ತಿ ಉರಿಯಿತು. ಪುರೋಹಿತರನ್ನು ಕರೆದು ಕೇಳಿದ. ತಂದೆಯ ಮರಣಕ್ಕೆ ಕಾರಣನಾದ ತಕ್ಷಕನನ್ನು ಕೊಂದು ಸೇಡುತೀರಿಸುವ ಛಲ ಹುಟ್ಟಿದೆ. ಅದಕ್ಕೆ ವಿಧಾನವನ್ನು ತಿಳಿಸಿರಿ.

ಪುರೋಹಿತರು ಋತ್ವಿಜರು ಹೇಳಿದರು. ನಿನಗಾಗಿಯೇ ದೇವತೆಗಳಿಂದ ಸೃಷ್ಟಿಯಾದ ಸರ್ಪಸತ್ರವೊಂದಿದೆ. ಸರ್ವಸರ್ಪೋಪಸಂಹಾರಕ ಸರ್ಪಸತ್ರವನ್ನು ನಡೆಸಿ ಸೇಡು ತೀರಿಸಿಕೋ.

ಹಾಗಾದರೆ ಆ ಯಜ್ಞಕ್ಕೆ ಸಿದ್ಧತೆ ನಡೆಸಿರಿ. ಎಂದಾಣತ್ತಿಯಿತ್ತ ರಾಜ. ಭೂಶೋಧನೆ ಮಾಡಿ ವಿಸ್ತಾರವಾದ ಯಜ್ಞಶಾಲೆಯ ನಿರ್ಮಾಣವಾಯಿತು. ಯಜ್ಞಾಯತನವನ್ನು ನಿರ್ಮಿಸಿದ ವಾಸ್ತು ವಿದ್ಯಾವಿಶಾರದನಾದ ಸ್ಥಪತಿ ಯಜ್ಞಶಾಲೆಯ ನಿರ್ಮಾಣಗೊಂಡ ದೇಶ–ಕಾಲಗಳ ಆಧಾರದಿಂದ ವಿಚಾರ ಮಾಡಿದರೆ ಈ ಯಜ್ಞ ಬ್ರಾಹ್ಮಣನೊಬ್ಬನ ಪ್ರಭಾವದಿಂದ ಅರ್ಧಕ್ಕೆ ನಿಲ್ಲುತ್ತದೆ. ಪೂರ್ಣವಾಗುವುದಿಲ್ಲ ಎಂದು ಭವಿಷ್ಯ ನುಡಿದ.

ಜನಮೇಜಯ ಅದನ್ನು ಕೇಳಿ ದ್ವಾರಪಾಲನಿಗೆ ಹೇಳಿದ. ಈ ಯಜ್ಞ ಪೂರೈಸುವವರೆಗೆ ದೀಕ್ಷಿತನಾದ ನಾನು ಯಾರನ್ನೂ ಭೇಟಿಯಾಗುವುದಿಲ್ಲ. ಯಾರನ್ನೂ ಒಳಗೆ ಬಿಡಬೇಡ.

ಯಜ್ಞ ಪ್ರಾರಂಭವಾಯಿತು. ಎಲ್ಲ ಯಾಜಕರೂ ತಮ್ಮ ತಮ್ಮ ಕಾರ್ಯನಿರ್ವಹಣೆಯಲ್ಲಿ ತತ್ಪರರಾದರು. ಕಪ್ಪುಬಟ್ಟೆಗಳನ್ನು ಸುತ್ತಲೂ ಪ್ರಾವರಣವಾಗಿ ಕಟ್ಟಿದರು. ಒಳಗೆ ಹೊಗೆಯಿಂದ ಕೆಂಗಣ್ಣುಗಳಾದ ಋತ್ವಿಜರು ಉಚ್ಚಕಂಠದಿಂದ ಸುಸ್ವರದಿಂದ ವೇದಮಂತ್ರಗಳನ್ನು ಉಚ್ಚರಿಸುತ್ತ ಯಜ್ಞ ನಡೆಸಿದರು. ಪ್ರಜ್ವಲಿಸುತ್ತಿರುವ ಅಗ್ನಿಯ ಕೆನ್ನಾಲಿಗೆಯಲ್ಲಿ ಸರ್ಪಗಳ ಎದೆ ನಡುಗಿಸುತ್ತ ನೂರಾರು ಸರ್ಪಗಳು ದೈನ್ಯದಿಂದ ಕಂಗೆಟ್ಟು ಚೀತ್ಕಾರ ಮಾಡುತ್ತ ಏದುಸಿರುವ ಬಿಡುತ್ತ ಉಂಡುಂಡೆಯಾಗಿ ಗಂಟು ಹಾಕಿಕೊಂಡು ತಲೆಕೆಳಗಾಗಿ ಮೇಲ್ಮುಖವಾಗಿ ಕಾಯುವವರನ್ನು ಕಾಣದೆ ದಿಕ್ಕೆಟ್ಟು ಉದುರಿ ಉದುರಿ ಆಹುತಿಯಾಗಿ ಬಿದ್ದವು. ಬಿಳಿ ಸರ್ಪಗಳು, ಕರಿ ಉರಗಗಳು, ನೀಲನಾಗಗಳು, ಮುದಿ ನಾಗಗಳು, ಮರಿನಾಗಗಳು, ಅರಚುತ್ತ ಬೊಬ್ಬಿಡುತ್ತ, ಬೆಂಕಿಯಲ್ಲಿ ಬೆಂದವು. ನೂರು, ಸಾವಿರ, ಹತ್ತು ಸಾವಿರ, ಲಕ್ಷಗಟ್ಟಲೆ ಹಾವುಗಳು ಹಾಹಾಕಾರಮಾಡುತ್ತ ಹುತವಾದವು. ಹತವಾದವು. ಸರ್ಪಗಳ ಈ

ಮಾರಣಹೋಮಕ್ಕೆ ಉಚ್ಚೈಶ್ರವಸ್ಸಿನ ಬಾಲ ಸುತ್ತಿಕೊಳ್ಳಲು ಒಪ್ಪದ ಕಾರಣದಿಂದ ಉಂಟಾದ ಮಾತೃಶಾಪವೇ ಕಾರಣ.

ಈ ಸರ್ಪಸತ್ರದಲ್ಲಿ ಚಂಡಭಾರ್ಗವ ಮುನಿ ಹೋತಾರರಾಗಿದ್ದರು. ಕೌತ್ಸಮುನಿ ಉದ್ಗಾತೃ ,ಜೈಮಿನಿ ಬ್ರಹ್ಮಾ, ಶಾರ್ಙ್ಗರವ ಅಧ್ವರ್ಯು ವೇದವ್ಯಾಸರು ಅವರ ಪುತ್ರರು ಶಿಷ್ಯರೆಲ್ಲ ಸದಸಸ್ಪತಿಗಳಾಗಿದ್ದರು. ಉದ್ದಾಲಕ, ಶ್ವೇತಕೇತು, ಅಸಿತ, ದೇವಲ ನಾರದ ಪರ್ವತ ಮುಂತಾದ ಮುನಿ ಮಹನೀಯರು ಸದಸ್ಯರಾಗಿದ್ದರು.

ಆಹುತಿಯಾದ ಸರ್ಪಗಳ ದೇಹದ ವಸಾ ಮೇದಸ್ಸುಗಳು ಬೆಂಕಿಯಲ್ಲಿ ಬೆಂದು ಅವುಗಳ ವಿಷೋಲ್ಬಣ ಗಂಧದ ಹೊಗೆ ಎಲ್ಲೆಡೆ ದಟ್ಟಿಸಿತು. ಬೆದರಿ ಬೆಂಡಾದ ತಕ್ಷಕ ಇಂದ್ರನಲ್ಲಿ ಶರಣಾದ. ಹೆದರಬೇಡ ತಕ್ಷಕ. ನಿನಗಾಗಿಯೇ ಹಿಂದೆ ಬ್ರಹ್ಮದೇವರಲ್ಲಿ ನಾನು ವರ ಕೇಳಿದ್ದೇನೆ. ನೀನು ಈ ಸರ್ಪಸತ್ರದಲ್ಲಿ ಆಹುತಿಯಾಗಿ ಸಾಯುವುದಿಲ್ಲ ಎಂದ ಇಂದ್ರ.

ನಿರಂತರವಾಗಿ ನಡೆಯುತ್ತಿರುವ ಸರ್ಪಸಂಹಾರದಿಂದ ವಿಹ್ವಲಗೊಂಡು ವಾಸುಕಿ ತನ್ನ ತಂಗಿ ಜರತ್ಕಾರುವಿನಲ್ಲಿ ಮೊರೆಯಿಟ್ಟ. ತಂಗಿ! ತಲ್ಲಣಗೊಂಡಿದ್ದೇನೆ ನಾನು. ಬೆಂಕಿಯಲ್ಲಿ ಬೀಳದೆನೆ ಸಾವಿನ ಭಯಾಗ್ನಿಯಲ್ಲಿ ನನ್ನ ಅಂಗಾಂಗಗಳು ಸುಡುತ್ತಿವೆ. ದಿಕ್ಕೇ ಕಾಣುತ್ತಿಲ್ಲ. ಎದೆ ನಡುಗುತ್ತಿದೆ. ಶಕ್ತಿ ಉಡುಗುತ್ತಿದೆ. ಕಣ್ಣು ತಿರುಗುತ್ತಿದೆ. ನಾನಿಂದು ಅವಶನಾಗಿ ಬೆಂಕಿಯಲ್ಲಿ ಬಿದ್ದು ಸಾಯುತ್ತೇನೆ. ನಮ್ಮ ಸಂಹಾರಕ್ಕಾಗಿಯೇ ಈ ಸತ್ರವನ್ನು ನಡೆಸುತ್ತಿದ್ದಾನೆ. ನಿಶ್ಚಯವಾಗಿ ನಾನು ಯಮಾಲಯವನ್ನು ಸೇರುತ್ತೇನೆ. ಯಾವ ಮಹತ್ತರ ಕಾರಣಕ್ಕಾಗಿ ನಿನ್ನನ್ನು ಜರತ್ಕಾರುವಿಗೆ ಕೊಟ್ಟು ಮದುವೆ ಮಾಡಿದೆನೋ ಆ ಕಾಲ ಸಮೀಪಿಸಿದೆ. ನಿನ್ನ ಮಗನಾದ ಆಸ್ತೀಕನಿಗೆ ಆದೇಶ ನೀಡು. ಅವನಿಂದ ಸರ್ಪಕುಲ ಸಂರಕ್ಷಣೆಯಾದೀತು.

ಅಣ್ಣನ ಮಾತಿನಿಂದ ಸರ್ಪಬಾಂಧವರಿಗೆ ಒದಗಿದ ಆಪತ್ತನ್ನು ಅರಿತ ಜರತ್ಕಾರು ಮಗನಾದ ಆಸ್ತೀಕನನ್ನು ಕರೆದು ಹೇಳಿದಳು.

ವತ್ಸ! ಆಸ್ತೀಕ! ಹಿಂದೊಮ್ಮೆ ನಾಗಮಾತೆ ಕದ್ರೂ ಹಾಗೂ ವಿನತೆಯರಿಗೆ ಸ್ಪರ್ಧೆ ನಡೆಯಿತು. ಉಚ್ಚೈಃಶ್ರವಸ್ಸು ಎಂಬ ಸಮುದ್ರಮಥನದಿಂದ ಹುಟ್ಟಿದ ಕುದುರೆಯು ಬಿಳಿಯೋ ಕಪ್ಪೋ ಎಂದು. ಸೋತವರು ಗೆದ್ದವರ ದಾಸರಾಗಬೇಕೆಂಬ ಕರಾರಿನೊಂದಿಗೆ ನಡೆದ ಈ ಪಂದ್ಯದಲ್ಲಿ ಸೋಲಿನ ಭಯದಿಂದ ಕದ್ರೂ ತನ್ನ ಮಕ್ಕಳಾದ ಕರಿನಾಗಗಳಿಗೆ ಅಶ್ವದ ಬಾಲವನ್ನು ಸುತ್ತಿಕೊಳ್ಳುವಂತೆ ಕೇಳಿಕೊಂಡಳು. ಅಮ್ಮನ ಕುಹಕತನಕ್ಕೆ ಒಪ್ಪದ ಸರ್ಪಗಳಿಗೆ ಜನಮೇಜಯನ ಯಜ್ಞದ ಬೆಂಕಿಯಲ್ಲಿ ಬಿದ್ದು ಸಾಯಿರಿ ಎಂದು ಶಾಪಕೊಟ್ಟಳು. ಕ್ರೂರ

ಸರ್ಪಗಳಿಂದ ಲೋಕಕ್ಕೆ ಹಾನಿಯಾಗದಿರಲೆಂದು ಬ್ರಹ್ಮನೂ ಈ ಶಾಪವನ್ನು ಸಮ್ಮತಿಸಿದ. ವಾಸುಕಿನಾಗ ಈ ಶಾಪದಿಂದ ಸರ್ಪಕುಲ ಸಂಹಾರವಾಗುವುದೆಂಬ ಭೀತಿಯಿಂದ ಅಮೃತಮಥನ ಮುಗಿದ ಮೇಲೆ ಸುರರೊಂದಿಗೆ ಬ್ರಹ್ಮನಲ್ಲಿ ಶರಣಾದ. ನಿನ್ನ ತಂಗಿ ಜರತ್ಕಾರು ಅದೇ ಹೆಸರಿನ ಗಂಡನಲ್ಲಿ ಪಡೆದ ಮಗನಿಂದ ಸರ್ಪಕುಲ ಸಂರಕ್ಷಣೆಯಾಗುವುದೆಂದು ಬ್ರಹ್ಮದೇವರು ಹೇಳಿದರು. ಆ ಆಪದ್ಬಾಂಧವ ನೀನೇ ಆಗಿರುವಿ. ವಾಸುಕಿಯಿಂದ ಆರಂಭಿಸಿ ಉಳಿದ ಸರ್ಪಗಳ ಸಂರಕ್ಷಣೆ ನಿನ್ನಿಂದಾಗಲಿ ಹೋಗು ಎಂದಳು.

ಹಾಗೆ ಆಗಲೆಂದು ವಾಸುಕಿಗೆ ರಕ್ಷಣೆಯ ಭರವಸೆ ಕೊಟ್ಟು ಆಸ್ತೀಕ ಜನಮೇಜಯನ ಸರ್ಪಸತ್ರಕ್ಕೆ ತೆರಳಿದ. ದ್ವಾರಪಾಲಕರು ಅವನನ್ನು ತಡೆದರು. ರಾಜಾಜ್ಞೆಯಂತೆ ಒಳಗೆ ಬಿಡಲಿಲ್ಲ. ಆಗ ಆಸ್ತೀಕ ಜನಮೇಜಯನ ಯಜ್ಞವನ್ನು ಬಹುವಾಗಿ ಪ್ರಶಂಸೆಗೈದ– ಜನಮೇಜಯನ ಯಜ್ಞವು ಸೋಮ, ವರುಣ, ಪ್ರಜಾಪತಿ, ಯಮ, ದಕ್ಷ, ರಂತಿದೇವ, ಗಯ, ಶಶಬಿಂದು, ನೃಗ, ಅಜಮೀಢ, ಯುಧಿಷ್ಠಿರ, ಕೃಷ್ಣ ವ್ಯಾಸರು ನಡೆಸಿದ ಯಜ್ಞಗಳಂತೆ ಕಂಗೊಳಿಸುತ್ತಿದೆ. ವೇದವ್ಯಾಸರಂತಹ ಮಹಾಜ್ಞಾನಿಗಳು ಸದಸಸ್ಪತಿಗಳಾಗಿರುವ ಈ ಯಜ್ಞಕ್ಕೆ ಸರಿಸಾಟಿಯಿಲ್ಲ. ಯಜ್ಞದಿಂದ ಸಂತುಷ್ಟನಾದ ಅಗ್ನಿದೇವ ನಿನ್ನ ಇಷ್ಟಾರ್ಥವನ್ನೀಯಲಿ. ಖಟ್ವಾಂಗ ನಾಭಾಗ ದಿಲೀಪ ಮಾಂಧಾತೃಗಳಂತಹ ಪ್ರಭಾವಿ ನೀನು. ಆದಿತ್ಯನಂತಹ ತೇಜಸ್ಸು ಭೀಷ್ಮರಂತೆ ಸತ್ಯವ್ರತ, ವಾಲ್ಮೀಕಿಗಳಂತೆ ವೀರ್ಯವಂತ. ವಸಿಷ್ಠರಂತೆ ಕೋಪನಿಗ್ರಹ, ಇಂದ್ರನಂತೆ ಪ್ರಭುತ್ವ, ನಾರಾಯಣನಂತಹ ಕಾಂತಿ ನಿನ್ನದು. ಈ ರಾಜಪ್ರಶಂಸೆಯಿಂದ ಪ್ರಸನ್ನರಾದ ದ್ವಾರಪಾಲಕರು ಋತ್ವಿಜರು ಆಸ್ತೀಕನನ್ನು ಬರಮಾಡಿಕೊಂಡರು. ಸಂತಸಗೊಂಡ ರಾಜ ಆಸ್ತೀಕರ ಬ್ರಹ್ಮವರ್ಚಸ್ಸನ್ನು ನೋಡಿ ಬೆರಗಾದ. ವಿಪ್ರರೇ ಈ ಮಹಾಶಯನ ತೇಜಸ್ಸು ನೋಡಿದರೆ ವರ ಕೊಡಬೇಕೆನಿಸುತ್ತದೆ. ನೀವು ಸಮ್ಮತಿಸಬೇಕೆಂದ. ವಿಪ್ರನು ಬಾಲಕನಾದರೂ ಮಾನ್ಯ. ವಿದ್ವಾಂಸನಾಗಲಿ ಅವಿದ್ವಾಂಸನಾಗಿರಲಿ ವಿಪ್ರ ಸರ್ವಮಾನ್ಯ. ಸಕಲಾರ್ಥಸಿದ್ಧಿಗಾಗಿ ಇವನನ್ನು ಆದರಿಸು. ಎಲ್ಲ ದಾನಗಳಿಗೂ ಇವನು ಅರ್ಹ ಎಂದರು.

ಅಷ್ಟರಲ್ಲಿ ಹೋತೃವು ರಾಜನ ಬಳಿ ಬಂದು ಕಿವಿಯಲ್ಲಿ ಮೆಲ್ಲನೆ ಉಸುರಿದ. ವಿಪ್ರನನ್ನು ನೋಡಿ ಮೈ ಮರೆಯಬೇಡ. ಇನ್ನೂ ಯಜ್ಞಕ್ಕೆ ತಕ್ಷಕ ಆಹುತಿಯಾಗಿ ಬಂದಿಲ್ಲ. ಕೂಡಲೆ ಜಾಗೃತನಾದ ರಾಜ. ನನ್ನ ಪ್ರಧಾನ ಶತ್ರು ತಕ್ಷಕ ಬೆಂಕಿಯಲ್ಲಿ ಬೀಳಲು ಏರ್ಪಾಡು ಮಾಡಿರಿ ಎಂದ. ಋತ್ವಿಜರು ಹೇಳಿದರು. ರಾಜನ್! ತಕ್ಷಕ ಇಂದ್ರನಲ್ಲಿ ಶರಣಾಗಿದ್ದಾನೆ. ಇಂದ್ರ ಅವನಿಗೆ ಆಸರೆಯಾಗಿದ್ದಾನೆ. ತಕ್ಷಕ ಬರಲಾರನು.

ಕುಪಿತನಾದ ರಾಜ ಆರ್ಭಟಿಸಿದ. ಯಾವ ಕಾರಣಕ್ಕೂ ಆ ತಕ್ಷಕ ಉಳಿಯಬಾರದು. **'ಸಹೇಂದ್ರಾಯ ತಕ್ಷಕಾಯ ಸ್ವಾಹಾ'** ಎನ್ನಿರಿ. ಇಂದ್ರನೊಂದಿಗೆ ತಕ್ಷಕನೂ ಬರಲಿ. ರಾಜಾಜ್ಞೆಯಂತೆ ಹೋತಾರನು ಇಂದ್ರನಿಂದ ಸಹಿತನಾದ ತಕ್ಷಕನೂ ಬರಲೆಂದು ಮಂತ್ರ ಹೇಳಿದ. ಮಂತ್ರದ ಪ್ರಭಾವದಿಂದ ಇಂದ್ರಸಹಿತನಾಗಿ ತಕ್ಷಕನು ಬಂದೇ ಬಂದ. ಸಾವಿನ ಭಯದಿಂದ ಇಂದ್ರನ ಉತ್ತರೀಯ ವಸ್ತ್ರದಲ್ಲಿ ತಕ್ಷಕ ಅಡಗಿದ್ದ. ರಾಜನ ಭೀಕರ ಯಜ್ಞವನ್ನು ಗಮನಿಸಿದ ದೇವೇಂದ್ರ ತಕ್ಷಕನನ್ನು ಕೊಡವಿ ಬಿಟ್ಟು, ತನ್ನ ಲೋಕಕ್ಕೆ ತಾನು ತೆರಳಿದ.

ಋತ್ವಿಜರು ಹೇಳಿದರು. ರಾಜ! ಅದೋ ಭಯದಿಂದ ತತ್ತರಿಸಿ ಕಂಗೆಟ್ಟ ತಕ್ಷಕ ಇಂದ್ರನಿಂದ ಮುಕ್ತನಾಗಿ ಗಗನದಲ್ಲಿ ಬರುತ್ತಿದ್ದಾನೆ. ನಿನ್ನ ಯಜ್ಞ ಪೂರ್ಣವಾದಂತೆಯೇ. ಅವನು ಜಾರಿ ಬೀಳುವಷ್ಟರಲ್ಲಿ ಈ ಬ್ರಾಹ್ಮಣನಿಗೆ ವರ ನೀಡು. ರಾಜನು ಆಸ್ತೀಕನನ್ನು ನೋಡಿ ಉತ್ಸಾಹದಿಂದ ವಿಪ್ರೋತ್ತಮ! ಏನು ಬೇಕಾದರೂ ವರವನ್ನು ಕೇಳು. ಕೊಡುತ್ತೇನೆ. ಅದು ಅದೇಯವಾಗಿದ್ದರೂ ಸರಿ. ತಕ್ಷಕನ ಪತನವನ್ನು ಗಮನಿಸಿದ ಆಸ್ತೀಕ ಇದೇ ಸುಸಮಯವೆಂದರಿತು ನಾನು ಕೇಳಿದ್ದನ್ನು ಕೊಡುವೆಯಾದರೆ ಈ ಕ್ಷಣದಲ್ಲಿ ಈ ಸರ್ಪಸತ್ರವನ್ನು ನಿಲ್ಲಿಸು. ಉಳಿದ ಸರ್ಪಗಳು ಸಾಯದಿರಲಿ ಎಂದು ಕೇಳಿದ. ಇದರಿಂದ ಅಸಮಾಧಾನಗೊಂಡ ರಾಜ, ವಿಪ್ರ! ಸುವರ್ಣವನ್ನೋ ರಜತವನ್ನೋ, ಹಸುಗಳನ್ನೋ ಕೇಳು ಕೊಡುತ್ತೇನೆ. ಈ ಯಜ್ಞ ನಿಲ್ಲದಿರಲಿ ಎಂದ. ಸರ್ಪಸತ್ರದ ವಿರಾಮದ ಹೊರತು ಬೇರಾವುದೂ ನನಗೆ ಬೇಕಿಲ್ಲ. ನನ್ನ ಮಾತೃವಂಶದವರಿಗೆ ಸ್ವಸ್ತಿಯಾಗಲಿ ಎಂದ ಆಸ್ತೀಕ. ಜನಮೇಜಯ ಎಷ್ಟು ಬಾರಿ ಬೇರೆ ವರವನ್ನು ಕೇಳುವಂತೆ ಒತ್ತಾಯಿಸಿದರೂ ಆಸ್ತಿಕ ಮಣಿಯಲಿಲ್ಲ. ಕೊನೆಗೆ ವೇದವೇತ್ತರಾದ ಎಲ್ಲ ಸದಸ್ಯರೂ ಒಕ್ಕೊರಲಿನಿಂದ ಹೇಳಿದರು–ರಾಜನ್! ಬ್ರಾಹ್ಮಣನು ಕೇಳಿದ ವರವನ್ನೇ ನೀಡು.

ಆಸ್ತೀಕನು ಅಂತರಿಕ್ಷದಿಂದ ಉದುರಿ ಬೀಳುತ್ತಿದ್ದ ತಕ್ಷಕನನ್ನು ನಿಲ್ಲು ನಿಲ್ಲು ನಿಲ್ಲು ಎಂದು ಹೇಳಿ ಅಲ್ಲಿಯೇ ನಿಲ್ಲಿಸಿದ. ಅಷ್ಟರಲ್ಲಿ ಜನಮೇಜಯ ಯಜ್ಞ ಸದಸ್ಯರಿಂದ ಪ್ರಚೋದಿತವಾಗಿ ಯಜ್ಞಶಾಲೆಯ ವಾಸ್ತು ನೋಡಿ ನುಡಿದ. ತಂತ್ರಜ್ಞನ ಮಾತನ್ನು ನೆನಪು ಮಾಡಿಕೊಂಡು ಆಸ್ತೀಕನಿಗೆ ತಥಾಸ್ತು ಎಂದ. ಸರ್ಪಸತ್ರ ಅಲ್ಲಿಗೆ ನಿಂತಿತು. ಪ್ರಸನ್ನಮನಸ್ಕನಾದ ರಾಜ ಋತ್ವಿಗ್‌ಗಳಿಗೆ ಸದಸ್ಯರಿಗೆ ದಕ್ಷಿಣೆ ಕೊಟ್ಟು ಕೃಷ್ಣಾರ್ಪಣ ಎಂದ. ಕರಾರುವಕ್ಕಾಗಿ ಬ್ರಾಹ್ಮಣನೊಬ್ಬನಿಂದ ಯಜ್ಞ ಅರ್ಧಕ್ಕೆ ನಿಲ್ಲುತ್ತದೆ ಎಂದು ಭವಿಷ್ಯ ನುಡಿದ ಸ್ಥಪತಿಯ ವಾಸ್ತು ಪಾಂಡಿತ್ಯಕ್ಕೆ ಬೆರಗಾಗಿ ಮೆಚ್ಚಿ ಬಹುದ್ರವ್ಯದ ಬಹುಮಾನವಿತ್ತು ಸತ್ಕರಿಸಿದ. ಆಸ್ತೀಕನನ್ನು ಆದರಿಸಿ ಮತ್ತೊಮ್ಮೆ ಬರಬೇಕೆಂದು ಬಿನ್ನವಿಸಿ ನಾನು ಮುಂದೆ ನಡೆಸುವ ಅಶ್ವಮೇಧಯಜ್ಞದಲ್ಲಿ

ನೀವು ಸದಸ್ಯರಾಗುವಿರಿ ಎಂದು ಹೇಳಿ ಕಳುಹಿಸಿಕೊಟ್ಟ. ತನ್ನ ತಾಯಿ ಹಾಗೂ ಸೋದರಮಾವಂದಿರ ರಕ್ಷಣೆಯಾಯಿತೆಂದು ಆನಂದದಿಂದ ಹಿಂದಿರುಗಿದ. ಆಸ್ತೀಕನು ಅಮ್ಮನಲ್ಲಿ ಹೋಗಿ ನಡೆದದ್ದನ್ನೆಲ್ಲ ನುಡಿದ. ಸರ್ಪಗಳಿಗೆ ಪುನರ್ಜನ್ಮವನ್ನೇ ದಯಪಾಲಿಸಿದ ಆಸ್ತೀಕರನ್ನು ನೋಡಿ ವಾಸುಕಿ ಮುಂತಾದ ಸರ್ಪಗಳು ಸಂತಸಗೊಂಡು ನಿನಗೇನು ಪ್ರಿಯವಾದುದನ್ನು ಮಾಡೋಣ? ಹೇಳು. ಏನು ಬೇಕಾದರೂ ವರವನ್ನು ಕೇಳು ಅಂದರು. ಯಾರು ಯಾರು ಸಾಯಂ–ಪ್ರಾತಃ ಕಾಲಗಳಲ್ಲಿ ಈ ಕಥೆಯನ್ನು ಕೇಳುತ್ತಾರೆ ಓದುತ್ತಾರೆ ಅವರಿಗೆ ನಿಮ್ಮಿಂದ ಭಯವಾಗಬಾರದು ಎಂದು ವರ ಕೇಳಿದ. ಆಸ್ತೀಕನ ನಿರ್ಮಲ ಅಂತಃಕರಣವನ್ನು ನೋಡಿ ಖುಷಿಗೊಂಡ ವಾಸುಕಿ ಎಲ್ಲ ಸರ್ಪಗಳಿಗೆ ಆದೇಶಿಸಿದ. ಇನ್ನು ಮುಂದೆ ನಮ್ಮೆಲ್ಲರ ಪ್ರಾಣ ಉಳಿಸಿದ ಆಸ್ತೀಕನನ್ನು ಯಾರು ಸ್ಮರಿಸುವರೋ ಅವರನ್ನು ಯಾವ ಸರ್ಪಗಳೂ ಹಿಂಸಿಸಬಾರದು. ಈ ಆದೇಶವನ್ನು ಮೀರಿ ಯಾವ ಸರ್ಪವಾದರೂ ಆಸ್ತೀಕನನ್ನು ಸ್ಮರಿಸಿದವರಿಗೂ ಹಿಂಸೆಕೊಟ್ಟರೆ ಅದರ ತಲೆ ಸಹಸ್ರ ಹೋಳಾಗಲಿ ಎಂದರು. ಆಸ್ತೀಕನು ಇದರಿಂದ ಸಂತೋಷಗೊಂಡ.

ತನ್ನ ಪೂರ್ವಜರಾದ ಸರ್ಪಗಳನ್ನು ಮರಣಭಯದಿಂದ ಕಾಪಾಡಿದ ಆಸ್ತೀಕನು ಮುಂದಿನ ಮಾನವರಿಗೆ ಸರ್ಪಗಳಿಂದ ಭಯನಿವಾರಣೆಯಾಗುವಂತೆಯೂ ಅನುಗ್ರಹಿಸಿದ್ದಾನೆ. ಆಸ್ತೀಕನ ಅಭಯದಾನ ಎಂತಹ ಪುಣ್ಯಪ್ರದವಾದ ಹರಿಮೆಚ್ಚುವ ಪೂಜೆಯಲ್ಲವೆ? ಸಮಾಜದ ಪ್ರತಿಯೊಬ್ಬರೂ ಆಸ್ತೀಕನಂತೆ ಅಭಯದಾನ ನೀಡಿದರೆ ಸಮಾಜ ಸಂತೋಷ ಸಮೃದ್ಧಿಗಳ ತಾಣವಾಗುತ್ತದೆ. ಮನೆಯಿಂದ ಆರಂಭಿಸಿ ದೇಶದ ಗಡಿಯವರೆಗೂ ಎಲ್ಲೆಲ್ಲೂ ಭಯೋತ್ಪಾದನೆ ನಡೆಯುತ್ತಿರುವ ಈ ಸಂಕಟದ ಕಾಲದಲ್ಲಿ ಆಸ್ತೀಕ ನಮಗೆಲ್ಲರಿಗೂ ಅತ್ಯಂತ ಅನುಕರಣೀಯ ಆದರ್ಶ ಪುರುಷನಾಗಿದ್ದಾನೆ. ಎಲ್ಲ ಜಾತಿಯವರಿಗೂ ವಿಪ್ರ ಅಭಯಪ್ರದನಾಗಬೇಕು ಎಂಬ ವಿಪ್ರರ ಜವಾಬ್ದಾರಿಯನ್ನು ಈ ಕಥೆ ತಿಳಿಸುತ್ತದೆ. ಮಾತೃಶಾಪವೆಂಬ ಬೆಂಕಿಯಿಂದಲೇ ಸರ್ಪಗಳನ್ನು ಸಂರಕ್ಷಣೆ ಮಾಡಿ ಮಾತೃವಾಕ್ಯ ಪರಿಪಾಲಕನಾದ ಆಸ್ತೀಕನು ನಾವೆಲ್ಲರೂ ತಾಯಿ ಹೇಳಿದಂತೆ ಕೇಳಿಕೊಂಡು ಅವಳ ಮನಸ್ಸನ್ನು ಸಂತೋಷಪಡಿಸಿ ಅನುಗ್ರಹಕ್ಕೆ ಪಾತ್ರನಾಗಬೇಕೆನ್ನುವುದನ್ನೂ ಇಲ್ಲಿ ಕಲಿಯಬೇಕು. ತಮ್ಮ ಸಂರಕ್ಷಣೆಯಿಂದ ಮುದಗೊಂಡ ಸರ್ಪಗಳಿಂದ ಯಾವ ಸ್ವಾರ್ಥದ ವರಗಳನ್ನೂ ಕೇಳದೆ ಇಡೀ ಮಾನವ ಸಮಾಜಕ್ಕೆ ಸರ್ಪಭಯನಿವಾರಣೆಯ ವರವನ್ನೂ ಕೇಳಿದ ಆಸ್ತೀಕನ ಹೃದಯದ ಔದಾರ್ಯವನ್ನೂ ಗಮನಿಸಬೇಕು. ಆಸ್ತೀಕನಾದವನು ಸರ್ವರಿಗೂ ಅಭಯಪ್ರದನಾಗಬೇಕು. ನಿಸ್ವಾರ್ಥದ ಔದಾರ್ಯವನ್ನೂ ಹೊಂದಿರಬೇಕು. ಭಯೋತ್ಪಾದಕರಾಗದೆ ಪ್ರತಿಯೊಬ್ಬರೂ ಅಭಯೋತ್ಪಾದಕರಾಗಬೇಕು. ★

## ಯೋಗದೀಪಿಕಾ ವಿದ್ಯಾಪೀಠ- 2009-10ರ ಪ್ರವೇಶಕ್ಕೆ ಅರ್ಜಿ ಆಹ್ವಾನ

ತ್ರೈಲೋಕ್ಯ ಗುರುಗಳಾದ ಶ್ರೀ ಮಧ್ವಾಚಾರ್ಯರ ನಿಜಶಿಷ್ಯಪ್ರವರರಾದ ಶ್ರೀ ಹೃಷೀಕೇಶತೀರ್ಥರ ಪರಂಪರೆಯಲ್ಲಿ ಇಪ್ಪತ್ತೈದನೆಯ ಯತಿವರ್ಯರಾಗಿ ಪೀಠವನ್ನಲಂಕರಿಸಿದ ಶ್ರೀ ರಘುಪ್ರವೀರತೀರ್ಥರ ತಪಸ್ಸಿಗೆ ಒಲಿದ ಘಟಿಕಾಚಲದ ಶ್ರೀಮುಖ್ಯಪ್ರಾಣದೇವರ ಆಡುಂಬೊಲವಾದ, ಮಂಗಳಾಷ್ಟಕಕರ್ತಾರರಾಗಿ ಪ್ರಖ್ಯಾತರಾದ ಶ್ರೀರಾಜರಾಜೇಶ್ವರತೀರ್ಥರು ಹಾಗೂ ಬಹುಗ್ರಂಥಪ್ರಣೇತೃಗಳಾದ ಯತಿತತಿನಿರ್ಮಾತೃಗಳಾದ, ವಿದ್ವದ್ವೃಂದವಿದ್ಯಾದಾತೃಗಳಾದ, ವಿದ್ಯಾಪೀಠ-ಮಧ್ವಮತವೃಂದಸಂಸ್ಥಾಪಕರಾದ, ದೇಶಾದ್ಯಂತ ವಾಕ್ಯಾರ್ಥನಡೆಸಿ-ಪ್ರತಿವಾದಿಗಳನ್ನು ಜಯಿಸಿ ವಾದಿಭಯಂಕರರೆನಿಸಿದ, ಪರವಿದ್ಯೆಗೆ ಮಾನ್ಯತೆಯನ್ನು ತಂದುಕೊಟ್ಟು ಪರವಿದ್ಯೆಯಿಂದ ಮಾನ್ಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರೇ ಮೊದಲಾದಯತಿವರೇಣ್ಯರ ತಪೋಭೂಮಿಯಾದ, ಶ್ರೀವೇದವ್ಯಾಸದೇವರ ನಿತ್ಯಸನ್ನಿಧಾನವಿರುವ ಪಲಿಮಾರಿನ ಶ್ರೀಮಠದಲ್ಲಿ ಶ್ರೀ ಮಠದ ಯೋಗದೀಪಿಕಾ ಟ್ರಸ್ಟ್‌ನ ಮೂಲಕ ನಡೆಸುವ ಯೋಗದೀಪಿಕಾ ವಿದ್ಯಾಪೀಠದಲ್ಲಿ ವೇದ, ಸಂಸ್ಕೃತ, ಪೌರೋಹಿತ್ಯ, ಆಗಮ ಹಾಗೂ ಜ್ಯೋತಿಷ್ಯಗಳ ಬಗ್ಗೆ ಆರು ವರ್ಷಗಳ ಶಿಕ್ಷಣ ನೀಡುತ್ತಿದ್ದು ಇದಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಏಪ್ರಿಲ್ ತಿಂಗಳ ದಿನಾಂಕ 24ರೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

ಈ ಸಂಸ್ಥೆಯು ಕರ್ನಾಟಕ ಸರಕಾರದ ಹಿಂದೂ ಧಾರ್ಮಿಕದತ್ತಿ ಇಲಾಖೆಯ ಮಾನ್ಯತೆ ಪಡೆದಿದ್ದು ರಾಜ್ಯ ಆಗಮ ಶಿಕ್ಷಣ ಮತ್ತು ಪರೀಕ್ಷಾ ಮಂಡಳಿ ನಡೆಸುವ ಪ್ರವರ ಮತ್ತು ಪ್ರವೀಣ ಪರೀಕ್ಷೆಗಳಲ್ಲಿ ಭಾಗವಹಿಸುವಂತೆ ಶಿಕ್ಷಣ ನೀಡಲಾಗುತ್ತಿದೆ.

ಉಪನೀತರಾದ 10 ವರ್ಷಕ್ಕಿಂತ ಮೇಲ್ಪಟ್ಟು 16 ವರ್ಷದ ಒಳಗಿನ ಬ್ರಾಹ್ಮಣ ವಟುಗಳು ಪ್ರವೇಶಪಡೆಯಲು ಅರ್ಹರಾಗಿದ್ದು ವಿದ್ಯಾರ್ಥಿಯ ಹೆಸರು, ಪೂರ್ಣವಿಳಾಸ (ದೂರವಾಣಿ ಸಂಖ್ಯೆ ಸಹಿತ) ವಯಸ್ಸು, ಗುರುಮಠ, ಗೋತ್ರ, ವೇದಶಾಖೆ ಈವರೆಗೆ ಆದ ವಿದ್ಯಾಭ್ಯಾಸದ ವಿವರಗಳನ್ನೊಳಗೊಂಡ ಅರ್ಜಿಯನ್ನು ಸಲ್ಲಿಸಬಹುದು.

ಕಾರ್ಯದರ್ಶಿ
ಯೋಗದೀಪಿಕಾ ಟ್ರಸ್ಟ್
ಶ್ರೀಪಲಿಮಾರು ಮಠ,
ರಥಬೀದಿ, ಉಡುಪಿ-576 101.
ದೂ. ಸಂಖ್ಯೆ: 2523402

ಉಪನಿಷತ್ ಸಂದೇಶ

ಭಾಗ-24

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ಒಳಗಿನ ಅರಿವಿನ ಮಾರ್ಗ ಶ್ರೇಯಸ್ಸು. ಇದನ್ನು ಅರಿತವನಿಗೆ ಸಾಧು-ಒಳ್ಳೆಯದು ಆಗುತ್ತದೆ.

ಇದು ದಂಡಧರನಾಗಿ ಯಮಪಾಶ-ಯಮಲೋಕ ತಪ್ಪಿಸಿಕೊಂಡವರನ್ನು ಅವರ ಜಾಣತನವನ್ನು ಕಂಡು ಭೇಷ್ ಎಂದು ಯಮ ಹೊಗಳುತ್ತಿದ್ದಾನೆ. ಆ ಸಾಧಕರ ಸಾಧನೆಗೆ ಯಮ ಮೆಚ್ಚಿಕೊಂಡಿದ್ದಾನೆ.

ಏಕೆಂದರೆ ಕೆಲವು ಮೊದಲು ಮಧುರ ಅನಂತರ ದುಃಖದಾಯಕ. ಹೀಗಾಗಿ ಅವುಗಳ ಕಷ್ಟ ಅನುಭವಿಸಿದವರಿಗೆ ಗೊತ್ತು. ಆದರೆ ಅಧ್ಯಾತ್ಮದಲ್ಲಿ ಮೊದಲು ಕಷ್ಟ. ಅವನನ್ನು ನೋಡಿ ಎಲ್ಲರೂ ಅಯ್ಯೋ ಪಾಪ-ಪ್ರಾಣಿ ಅನಾವಶ್ಯಕ ಕಷ್ಟಪಡುತ್ತಿದೆ ಎನ್ನುತ್ತಾರೆ. ಕಷ್ಟ ಎಲ್ಲರಿಗೂ ಬಯಲು. ಜನ್ಮಾಂತರದಲ್ಲಿ ಸುಖದ ಹೊನಲು. ಇದು ಸಾಧಕನಿಗೆ ಮಾತ್ರ ತಿಳಿವು.

**ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮ್ ಏತಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ ।**
**ಶ್ರೇಯೋ ಹಿ ಧೀರೋ ಅಭಿಪ್ರೇಯಸೋ ವೃಣೀತೇ ಪ್ರೇಯೋ ಮಂದೋ ಯೋಗಕ್ಷೇಮಾನ್ ವೃಣೀತೇ ॥**

ಶ್ರೇಯಸ್ಸು-ಪ್ರೇಯಸ್ಸು ಇವೆರಡೂ ಮನುಷ್ಯನ ಮುಂದೆ ಬಂದು ನಿಲ್ಲುತ್ತವೆ. ಜ್ಞಾನಿಯಾದವನು ಅವೆರಡನ್ನೂ ಚೆನ್ನಾಗಿ ಪರಿಪರಿಯಾಗಿ ವಿವೇಚಿಸಿ ಪ್ರೇಯಸ್ಸನ್ನು ತಿರಸ್ಕರಿಸಿ ಬ್ರಹ್ಮವಿದ್ಯೆಯನ್ನು ಬಯಸುತ್ತಾನೆ. ಮಂದಬುದ್ಧಿಯ ಮಾನವ ಯೋಗಕ್ಷೇಮರೂಪವಾದ ಶ್ರೇಯಸ್ಸನ್ನೇ ಬಯಸುತ್ತಾನೆ. (ಪರದಾಡುವಿಕೆಯನ್ನೇ ಪರಮಸಾಹಸ ಎಂದುಕೊಳ್ಳುತ್ತಾನೆ)

ಮನುಷ್ಯ ವಿಷಯಗಳಿಗಾಗಿ ಹಲುಬುತ್ತಾ ನಿಂತಿರುತ್ತಾನೆ. ಆಗ ಆ ಧಾವಂತದಲ್ಲಿ ಶ್ರೇಯಸ್ಸು-ಪ್ರೇಯಸ್ಸು ಎರಡೂ ಮುಂದೇ ನಿಲ್ಲುತ್ತದೆ. ಆಗ ಆಕರ್ಷಣೆಗಳಿಗಾಗಿ ಕೈ-

ಬಾಯಿ–ಮನಸ್ಸು ಮುಂದೆ ಓಡುತ್ತದೆ. ಬುದ್ಧಿ ಹಿಂದೆ ಬೀಳುತ್ತದೆ. ಆಗ ಅವನು ಶ್ರೇಯಸ್ಸನ್ನು ಬಯಸಿ ಸೋಲುತ್ತಾನೆ. ಅಂಗಡಿಗೆ ಹೋಗಿ ಸಿಕ್ಕಿದ್ದನ್ನು ತೆಗೆದುಕೊಂಡವನ ಜೇಬು ಖಾಲಿಯಾಗುತ್ತದೆ. ಚೀಲ ತುಂಬುತ್ತದೆ. ಆದರೆ ಮನಸ್ಸು ಮಂಕಾಗಿರುತ್ತದೆ. ಮನೆಗೆ ಬಂದಾಗ ದುಡುಕಿದೆ ಎಂದು ಪಶ್ಚಾತ್ತಾಪಪಡುತ್ತಾನೆ.

ಅದಕ್ಕೆ ಅಂಗಡಿಗೆ ಹೋಗಿ ಪದಾರ್ಥ ನಿಶ್ಚಯಿಸಬಾರದು. ಮೊದಲು ಏನು ಕೊಳ್ಳಬೇಕೆಂದು ನಿಶ್ಚಯಿಸಿ ಅಂಗಡಿಗೆ ಹೋಗಬೇಕು. ಆ ವಿವೇಕಿಗೆ ಗೊಂದಲ ಕಮ್ಮಿ. ತರಕಾರಿ ವ್ಯಾಪಾರದಲ್ಲಿ ಪರವಾಗಿಲ್ಲ. ಚಿನ್ನ–ಬೆಳ್ಳಿ ಅಂಗಡಿಯಲ್ಲಿ ಚೂರು ಆಯ್ಕೆ ಬದಲಾದರೂ ಸಾವಿರಾರೂ ರೂಪಾಯಿ ವ್ಯತ್ಯಾಸ. ಕಂಡದ್ದೆಲ್ಲಾ ಚಿನ್ನ. ಬಿಳಿಯಾಗಿರುವುದೆಲ್ಲ ಬೆಳ್ಳಿ. ಹೀಗಾಗಿ ಮೊದಲು ನಿಶ್ಚಯಿಸು. ಆಮೇಲೆ ವ್ಯವಹರಿಸು.

ಮಾರುಕಟ್ಟೆ ಬೇರೆಯಲ್ಲಾ. ಪ್ರೇಯಸ್ಸು–ಶ್ರೇಯಸ್ಸು ಬೇರೆಯಲ್ಲ. ಅಲ್ಲಿ ತೆಗೆದುಕೊಂಡ ವಸ್ತು ಬದಲಾಯಿಸಲಾಗದು. ಇಲ್ಲಿ ಪ್ರೇಯಸ್ಸಿನಮಾರ್ಗ ಬಿಟ್ಟು ಶ್ರೇಯಸ್ಸಿನಮಾರ್ಗ ಮಧ್ಯೆ ಬದಲಿಸಲಾಗದು.

Goods once sold cannot be exchanged or returned. ಅದಕ್ಕೆ ಯಮನೆಂದ. ಮಾರ್ಕೆಟ್‌ನಲ್ಲಿ ಧನವಿದ್ದರೆ ಸರಿ. ಪಾರತ್ರಿಕದಲ್ಲಿ ಜ್ಞಾನಧನ ಇರಬೇಕು. ಅದಕ್ಕೆ ಯಮನು ಹೇಳಿದ ಧೀರಃ– ಬುದ್ಧಿಯಲ್ಲಿ ಖುಷಿಪಡುವವನು.

ಲೋಕದಲ್ಲಿ ವೀರರು ಸಿಗುತ್ತಾರೆ. ಶೂರರು ಸಿಗುತ್ತಾರೆ. ಆದರೆ ಧೀರರು–ವಿವೇಕಿಗಳು ಕಮ್ಮಿ. ವಿವೇಕಿಗಳು ಮಾತ್ರ ಶ್ರೇಯಸ್ಸು–ಪ್ರೇಯಸ್ಸನ್ನು ಬೇರ್ಪಡಿಸುತ್ತಾರೆ. ವಿವಿನಕ್ತಿ–ವಿಶೇಷವಾಗಿ ಬೇರ್ಪಡಿಸುತ್ತಾರೆ. ಮತ್ತೆಂದೂ ಮೋಸ ಹೋಗದ ಹಾಗೆ! ಅದು ಚೆನ್ನಾಗಿ ಪರೀಕ್ಷಿಸಿ ಆ ಮೇಲೆ ಬೇರ್ಪಡಿಸುತ್ತಾರೆ. ಪ್ರೇಯಸ್ಸಿನಿಂದ ಸುಖವಿಲ್ಲ ಎಂದು.

ಶ್ರೀಪಾದರಾಜರ ಮಾತು ಹಾಗೆಯೇ ಇದೆ:–

ಧನದಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ತನುವಿನಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ಮನೆಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ಇಂತು ಅವರವರ ಸಂತೋಷ ಅವರವರಿಗಿರಲಿ
ಎನಗೆ ನಿನ್ನ ನೆನೆವುದೇ ಸಂತೋಷವಯ್ಯಾ–ರಂಗವಿಠಲಾ ಎಂದು

**(ಮುಂದುವರಿಯುವುದು)**

ಸ್ತೋತ್ರ ಚಿಂತನೆ

ಭಾಗ–12

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

**ಪಾಪಾಪಹಾರಿ ದುರಿತಾರಿ ತರಂಗಧಾರಿ**
**ಶೈಲಪ್ರಚಾರಿ ಗಿರಿರಾಜ ಗುಹಾವಿದಾರಿ ।**
**ಝುಂಕಾರಕಾರಿ ಹರಿಪಾದ ರಜೋಪಹಾರಿ**
**ಗಾಂಗಂ ಪುನಾತು ಸತತಂ ಶುಭಕಾರಿ ವಾರಿ ॥**

ಕಣ್ಣನ್ನು ಸಂಬಂಧಿಸಿದ ರೆಪ್ಪೆಯು ಯಾರ ಪ್ರೇರಣೆಯೂ ಇಲ್ಲದೆ ಸ್ವಾಭಾವಿಕವಾಗಿ ಕಣ್ಣನ್ನು ಸರ್ವಪ್ರಕಾರಗಳಿಂದಲೂ ಸಲಹುವುದಕ್ಕಾಗಿ ಸದಾ ಸಿದ್ಧವಾಗಿರುವಂತೆ ತ್ರಿವಿಕ್ರಮನ ಆಕಾಶದ ವ್ಯಾಪ್ತಿಯಂತೆ ತ್ರಿವಿಕ್ರಮನ ಪಾದೋದ್ಭವೆಯಾದ ಗಂಗೆಯು ಭಕ್ತರ ಪಾಪಗಳನ್ನು ತೊಳೆಯಲು ಮಾತೃತ್ವದ ಹೃದಯದಿಂದ ಸದಾಸಿದ್ಧಳಾಗಿದ್ದಾಳೆ. ನಖದಿಂದ ಉದಿಸಿ ಸುಖದಿಂದ ಸಲುಹುವ ಭವಪೀಯೂಷವೆಂದೇ ಪ್ರಸಿದ್ಧಳಾದ ಗಂಗೆಯ ಮಹಿಮೆಯೇ ಅಪಾರವಿರುವಾಗ; ಇವಳಿಗೂ ಜನಕನಾದ ಪರಮಪುರುಷನಾದ ತ್ರಿವಿಕ್ರಮನ ಪರಾಕ್ರಮವನ್ನು ಬಣ್ಣಿಸುವ ಜಾಣರು ಧರೆಯಲ್ಲಿ ಯಾರಿದ್ದಾರೆ?.

ತ್ರಿವಿಕ್ರಮನ ವಿಶ್ವರೂಪವನ್ನು ಕಂಡ ಬಲಿಯು ಬಗೆಯಲ್ಲಿ ಬಣ್ಣಿಪ ಕ್ರಮ ಬಲು ಚಂದ.

**ತದ್ವಾಮನಂ ರೂಪಮವರ್ಧತಾದ್ಭುತಂ**
**ಹರೇರನಂತಸ್ಯ ಗುಣತ್ರಯಾತ್ಮಕಮ್ ।**
**ಭೂಃ ಖಂ ದಿಶಃ ದ್ಯೌರ್ವಿವರೋ ಪಯೋಧಯಃ**
**ತಿರ್ಯಂ ನೃದೇವಾಃ ಋಷಯೋ ಯದಾಸತ ॥**

**ಹೃದ್ಯಂಗ ಧರ್ಮಂ ಸ್ತನಯೋರ್ಮುರಾರೇ**
**ಋತಂ ಚ ಸತ್ಯಂ ಚ ಮನಸ್ಯಥೇಂದುಮ್ ।**
**ಶ್ರಿಯಂ ಚ ವಕ್ಷಸ್ಯರವಿಂದ ಹಸ್ತಾಂ**
**ಕಂಠೇ ಚ ಸಾಮಾನಿ ಸಮಸ್ತ ರೇಘಾನ್ ॥**

ಅನಂತಮಹಿಮನಾದ ವಾಮನರೂಪ ಅದ್ಭುತವಾಗಿ ಪ್ರವರ್ಧಮಾನವಾಯಿತು. ಭೂಮಿ, ಆಕಾಶ, ಅಂತರಿಕ್ಷ, ದಿಕ್ಕುಗಳು, ಪಾತಾಳ ಲೋಕಗಳು, ಸಮುದ್ರಗಳು, ಪಕ್ಷಿಗಳು, ಮೃಗಗಳು, ಮಾನವರು, ಋಷಿಗಳು ಎಲ್ಲರೂ ಎಲ್ಲೆ ಇಲ್ಲದ ವಿಶ್ವವಲ್ಲಭನಲ್ಲಿ ಆಶ್ರಯ ಪಡೆದಿದ್ದರು.

ಧರ್ಮವು ಹರಿಯ ಉದರವನ್ನು ಆಲಂಗಿಸಿದ್ದರೆ, ಸತ್ವ-ಋತಗಳು ಸ್ತನಗಳನ್ನು ಬಳಸಿದ್ದವು. ಚಂದ್ರನು ಹರಿಯ ಮನವನ್ನೇ ಮಲ್ಲಿಗೆಯನ್ನಾಗಿ ಮುಡಿದಿದ್ದರೆ; ಎಂದೆಂದೂ ಮುದುಡದ ಕಮಲಕರದ ಕಾಮಿನಿ ಮಹಾಲಕುಮಿಯು ಹರಿಯ ವಕ್ಷ ಸ್ಥಳದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಳು. ಹರಿಯಕಂಠದಲ್ಲಿ ಸಮಸ್ತ ಶಬ್ದಪ್ರಪಂಚ ಸಾಮವೇದಗಳು ಶೋಭಿಸುತ್ತಿದ್ದವು. ಇಂತಹ ಮಂಗಳ ರೂಪವನ್ನು ಅಂತರಂಗದಲ್ಲಿ ಕಂಡ ಬಲಿಗೆ ಭವದ ಸುಖಸಾಧನಗಳಿಗೆ ಬೆಲೆ ಇಲ್ಲವೆನಿಸಿತು.

ಚತುರ್ದಶಭುವನಗಳಿಂದ ಕೂಡಿದ ಶತಕೋಟಿಯೋಜನ ವಿಸ್ತಾರದ ಬ್ರಹ್ಮಾಂಡದ ಮೊಟ್ಟೆ ತ್ರಿವಿಕ್ರಮನ ನಖದ ಸ್ಪರ್ಶದಿಂದ ಸ್ಫೋಟವಾಯಿತೆಂದ ಬಳಿಕ ನಖದ ಮಹಿಮೆಯನ್ನೇ ಅರಿಯಲಾಗದ ಪಾಮರರು ತ್ರಿವಿಕ್ರಮನ ಪರಾಕ್ರಮವನ್ನರಿಯುವುದೆಂತು?.

**ಅಜಸ್ಯ ಶತಕೋಟ್ಯಂಡಚ್ಛೇದೇ ಯಸ್ಯ ಪದಾಂಗುಲೇಃ ।**
**ನಖಸ್ಯಾಪಿ ನವಿಚ್ಛೇದಃ ತಸ್ಯ ಸ್ವಧನುಷೈವ ಹಿ ।**
**ವಿಚ್ಛಿನ್ನ ಶಿರಸಂ ಶಂಭುಂ ನ ಕದಾಪಿ ಸಮಂ ವದ ॥**

ನೂರುಕೋಟಿ ಯೋಜನ ದಪ್ಪದ ಸುವರ್ಣಾತ್ಮಕವಾದ ಬ್ರಹ್ಮಾಂಡಕಟಾಹವು ಹರಿಯ ಉಗುರು ತಾಗಿ ಸೀಳಿಹೋಯಿತು. ಹರಿಯ ನಖದ ಸ್ಪರ್ಶದಿಂದ ಬ್ರಹ್ಮಾಂಡಕಟಾಹ ಸೀಳಿದ ಕೂಡಲೇ ಬ್ರಹ್ಮಾಂಡದ ಬಹಿರಾವರಣದಲ್ಲಿನ ಜಲವೆಲ್ಲವೂ ಒಳಗೆ ಬರಲಾರಂಭಿಸಿತು. ಜಗತ್ತೆಲ್ಲವೂ ನೀರಿನಲ್ಲಿ ತೇಲಿ ಹೋಗುವ ಅಪಾಯವನ್ನು ಕಂಡ ಮುಖ್ಯಪ್ರಾಣ ಬ್ರಹ್ಮಾಂಡದ ಕಟಾಹಕ್ಕೆ ತೇಪೆಹಾಕಿದ. ಬ್ರಹ್ಮದೇವರು ಬಿರುಸಿನಿಂದ ನುಗ್ಗಿದ ನೀರನ್ನು ತಮ್ಮ ಕಮಂಡಲುವಿನಲ್ಲಿ ಹಿಡಿದು ಅದರ ವೇಗ ಕಡಿಮೆಮಾಡಲು ಹರಿಪಾದಕ್ಕೆ ಹಾಕಿದರು. ಹರಿಯು ಕರುಣೆಯಿಂದ ಪಾದೋದಕವನ್ನಾಗಿಸಿ ಬ್ರಹ್ಮದೇವನನ್ನು ಮತ್ತೂ ಪವಿತ್ರೀಕರಿಸಿದ. ಇಷ್ಟೆಲ್ಲ ಕಥೆ ನಡೆದರೂ ಬ್ರಹ್ಮಾಂಡ ಒದ್ದ ತ್ರಿವಿಕ್ರಮನ ಪಾದ ನಖದಲ್ಲಿ ಒಂದು ಗೆರೆಯೂ ಗುರುತಾಗಿ ಉಳಿದಿಲ್ಲವಂತೆ. ಹಾಗಾದರೆ ಇವನ ಪರಾಕ್ರಮವೇನು? ಬ್ರಹ್ಮಾಂಡ ಒಡೆದರೂ ಗೆರೆಯೂ ಮೂಡದ ನಖವುಳ್ಳ ಶ್ರೀಹರಿಯು ಭಕ್ತನೋರ್ವನ (ಭೃಗುವಿನ) ಪಾದ ಚಿಹ್ನೆಯನ್ನು ನಿತ್ಯ ಶ್ರೀವತ್ಸ ಚಿಹ್ನೆಯನ್ನಾಗಿ ಧರಿಸಿದ್ದಾನೆಂದರೆ ಶ್ರೀಹರಿಯ ಕಾರುಣ್ಯಕ್ಕೆ ದೃಷ್ಟಾಂತವೇನು? ಆದ್ದರಿಂದ ಇಂತಹ ಶ್ರೀಹರಿಗೂ ತನ್ನ ಧನುಸ್ಸಿನಿಂದ ತನ್ನ ಕುತ್ತಿಗೆಯನ್ನೇ ಉದ್ದೇಶವಿಲ್ಲದೆಯೂ ನಾಶಪಡಿಸಿಕೊಳ್ಳುವ ರುದ್ರನಿಗೂ ಎಂದೆಂದಿಗೂ ಸಾಮ್ಯವನ್ನೇ ಹೇಳಲಾಗದು. ಹೀಗಿರಲು ಸರ್ವೋತ್ತಮತ್ವವೆಲ್ಲಿ? ಗಂಗೆಯನ್ನು ಧರಿಸಿದ ಗಂಗಾಧರನು ತ್ರಿವಿಕ್ರಮನ ಕರುಣೆಯಿಂದ ಶಿವನೆಂದೇ ಖ್ಯಾತನಲ್ಲವೇ?.

ತ್ರಿವಿಕ್ರಮನ ವ್ಯಾಪ್ತಿ ಆಕಾಶದಲ್ಲಿ. ಆಕಾಶ ಎಂದರೆ ಅವ್ಯಾಕೃತಾಕಾಶ. ಅದು ಇಲ್ಲದ ಜಾಗವೇ ಇಲ್ಲ. ಅದರಂತೆ ಹರಿ ಇಲ್ಲದ ಜಾಗವೇ ಇಲ್ಲ. ಇದನ್ನು ಅವನೊಬ್ಬನೇ ಬಲ್ಲ. ಈತನನ್ನು ಬಣ್ಣಿಸಲು ಬೊಮ್ಮಾದಿಗಳ ಸೊಲ್ಲು ಸಾಕಾಗುವುದಿಲ್ಲ. ಇಂತಹ ತ್ರಿವಿಕ್ರಮ ಬ್ರಹ್ಮಾಂಡದಲ್ಲಿ ವ್ಯಾಪ್ತನಾದಂತೆ ಪಿಂಡಾಂಡದಲ್ಲೂ ವ್ಯಾಪ್ತನೇ. ಸಾಧಕರೇ! ನಿಮ್ಮ ಜ್ಞಾನೇಂದ್ರಿಯ ಗಳನ್ನು ಗಮನಿಸಿದಾಗ ತ್ರಿವಿಕ್ರಮನ ವ್ಯಾಪ್ತಿ ತಿಳಿಯದಿರದು. ಹಿಂದೆ ತಿಳಿಸಿದಂತೆ ವಾಕ್–ಜಿಹ್ವೆಗಳಿಗೆ ವಾಮನ ಅಭಿಮಾನಿಯಾದದ್ದು ತಿಳಿದಿದೆ. ಈ ಜ್ಞಾನೇಂದ್ರಿಯಗಳಲ್ಲಿ ಕಣ್ಣು ಎರಡು. ಮೂಗಿಗೆ ನಾಳ ಎರಡು. ಕಿವಿ ಎರಡು. ಆದರೆ ವಾಕ್ ಒಂದು. ಈ ನಾಲ್ಕರಲ್ಲಿ ವಾಮನನಲ್ಲಿ ವಾಕ್. ಆದರೆ ಆ ವಾಕ್‌ನ ಪರಾಕ್ರಮದ ಮುಂದೆ ಎಲ್ಲವೂ ಅರ್ವಾಕ್. ಹೀಗೆ ಗಮನಿಸುತ್ತಾ ಹೋದಾಗ ಐದು ಜ್ಞಾನೇಂದ್ರಿಯಗಳಲ್ಲಿ ಎಲ್ಲದಕ್ಕಿಂತಲೂ ಹೆಚ್ಚಾಗಿ ವ್ಯಾಪಿಸಿದ ಜ್ಞಾನೇಂದ್ರಿಯವೆಂದರೆ ತ್ವಕ್. ಅಡಿಯಿಂದ ಮುಡಿಯ ವರೆಗೆ ಇದರ ವ್ಯಾಪ್ತಿ. ಹಾಗಾಗಿ ಜ್ಞಾನೇಂದ್ರಿಯಗಳ ಆಕೃತಿಯಲ್ಲಿ ತ್ವಗಿಂದ್ರಿಯದ ವ್ಯಾಪೃತಿ ತ್ರಿವಿಕ್ರಮನಂತೆ. ತ್ರಿವಿಕ್ರಮನು ಪಾತಾಳದಿಂದ ಸತ್ಯಲೋಕದ ತನಕ ಅಳೆದಂತೆ. ನಮ್ಮ ಪಾದತಳದಿಂದ ಶಿರಸ್ಸಿನ ತನಕ ಅಳೆವ ಮಹನೀಯ ತ್ರಿವಿಕ್ರಮ. ನಮ್ಮ ಚರ್ಮಕ್ಕೆ ಅಹಂಕಾರಿಕ ಪ್ರಾಣನು ಅಭಿಮಾನಿಯಾಗಿದ್ದರೆ ಅವನಿಗೆ ನಿಯಾಮಕನಾದ ತ್ರಿವಿಕ್ರಮನಿದ್ದಾನೆ. ಆದ್ದರಿಂದ **'ತ್ರಿವಿಕ್ರಮಃ ಖೇ ಅವತು'** ಎಂಬಲ್ಲಿ 'ಖ' ಎಂದರೆ ಇಂದ್ರಿಯ ಎಂದರ್ಥ. ಇಂದ್ರಿಯಗಳಲ್ಲಿ ವ್ಯಾಪ್ತವಾದ ಇಂದ್ರಿಯ ತ್ವಗಿಂದ್ರಿಯ. ಆ ತ್ವಗಿಂದ್ರಿಯದಲ್ಲಿದ್ದು ಅಹಂಕಾರಿಗಳಾಗದಂತೆ ತ್ರಿವಿಕ್ರಮನು ರಕ್ಷಿಸಲಿ. ರೂಪಮದ–ಐಶ್ವರ್ಯಮದಗಳಿಗೆ ಮರ್ದನ ತ್ರಿವಿಕ್ರಮನಿಂದಲೇ ಸಾಧ್ಯ. ಏಕೆಂದರೆ ಈ ಮದಗಳ ಮಹತ್ವ ತ್ರಿವಿಕ್ರಮನಂತೆ. ಬಲಿಯ ದಾನ–ಭೋಗಳ ಮದವನ್ನು ತ್ರಿವಿಕ್ರಮ ಇಳಿಸಿದಂತೆ. ನಮ್ಮ ಮನದ ಮದವನ್ನು ದಮನಮಾಡಿ ದಮವನ್ನು ನೀಡಲೆಂದು ಪ್ರಾರ್ಥಿಸಬೇಕು.

**(ಮುಂದುವರಿಯುವುದು)**

**ಶ್ರೀರಾಮಚಂದ್ರನೆಡೆಗೆ ಸಾಗಿದ ಶ್ರೀಸುಶಮೀಂದ್ರತೀರ್ಥರಿಗೆ ಶ್ರೀವಿದ್ಯಾಧೀಶತೀರ್ಥರ ಶ್ರದ್ಧಾಂಜಲಿ**

ಮಂತ್ರಾಲಯ ರಾಘವೇಂದ್ರಮಠದ ಪೀಠಾಧಿಪತಿಗಳಾಗಿ 20ಕ್ಕಿಂತಲೂ ಹೆಚ್ಚು ವರ್ಷ ಅಧಿಕಸೇವೆ ಸಲ್ಲಿಸಿ, ನಡೆದಾಡುವ ರಾಯರೆಂದೇ ಜನ ಸಾಮಾನ್ಯರಿಂದ ಗೌರವಿಸಲ್ಪಡುತ್ತಿದ್ದ 80ಕ್ಕಿಂತಲೂ ಅಧಿಕ ಮೃತ್ತಿಕಾ ವೃಂದಾವನಗಳ ಪ್ರತಿಷ್ಠಾಪನೆಗೆ ಕಾರಣರಾಗಿದ್ದ, ಮುಗ್ಧತೆಯ ಸಮಾಧಾನಚಿತ್ತದ ಸಾಕಾರಮೂರ್ತಿಗಳಾಗಿದ್ದ ನಮ್ಮ ಗುರುಗಳ ಹಾಗೂ ನಮ್ಮ ಬಗ್ಗೆ ವಿಶೇಷ ಅಭಿಮಾನ ಹೊಂದಿದ್ದ ಇದೀಗ ತಮ್ಮ ಸಾಧನೆಯನ್ನು ಪೂರೈಸಿ ಶ್ರೀರಾಮಚಂದ್ರನ ಪಾದ ಸೇರಿರುವ ಶ್ರೀ ಸುಶಮೀಂದ್ರ ತೀರ್ಥರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

**ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು, ಶ್ರೀಪಲಿಮಾರು ಮಠ, ಉಡುಪಿ**

ಭಾಗ–12

# ಜೀವನಯಜ್ಞ

## ಪರಿ ಪರಿ ಕೆಲಸವು ಹರಿಯ ಮಹಾಪೂಜೆ

ಸಂಕಲನ: ಸುನಂದಕೀ

ಭಗವನ್ಮಯಮಂದಿರವೆನಿಸಿದ ನಮ್ಮ ದೇಹದಲ್ಲಿ, ದೇಹದಿಂದ, ದೇಹಕ್ಕಾಗಿ ಆಗುವ ಅನೇಕ ಕೆಲಸಗಳೆಲ್ಲವೂ ಬಿಂಬನಾದ ಲಕುಮೀಶನ ಪೂಜೆ. ಭಗವಂತನ ಪ್ರೇರಣೆ ಹಾಗೂ ಆತನ ಪ್ರೀತಿಸಂಪಾದನೆ ಎಂಬ ಸಂಕಲ್ಪದಿಂದ ಅಂತೆಯೇ ಸಮರ್ಪಣಾಮನೋಭಾವದಿಂದ ಭಗವನ್ನಾಮಸ್ಮರಣ ಸಹಿತವಾಗಿ ಮಾಡಿದ ಯಾವುದೇ ಲೌಕಿಕಕರ್ಮಗಳೂ ಯಜ್ಞವೆನಿಸುವುವು. ಅದಕ್ಕಾಗಿಯೇ ಶ್ರೀಮದಾಚಾರ್ಯರು–

**–ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ**
**ಹರಿಪಾದ ವಿನಮ್ರಧಿಯಾ ಸತತಂ।**

' ನಿನಗೆ ಯೋಗ್ಯವಾದ ಕರ್ಮವನ್ನು ಮಾಡುವಾಗ ಹಾಗೂ ಆ ಕರ್ಮಫಲಗಳನ್ನುಣ್ಣುವಾಗ ಭಗವಂತನಲ್ಲಿ ಭಕ್ತಿಭಾವವಿರಲಿ. ಅಂದರೆ ಕರ್ಮಮಾಡುವಾಗಲೂ ಅವನ ಸ್ಮರಣೆ ಹಾಗೂ ಫಲಭೋಗದಲ್ಲೂ ಅವನ ಸ್ಮರಣೆಯಿರಲಿ' ಎಂದು ಆದೇಶಿಸಿದರು. ಅದನ್ನೇ ಹರಿದಾಸರು 'ಉಂಡು ಉಟ್ಟದ್ದೆಲ್ಲಾ ವಿಷ್ಣುಪೂಜೆ' ಎಂದರು. ಅಂತೆಯೇ ಉತ್ತರಭಾರತದ ಭಾವುಕರೂ ಕೂಡಾ

**ಕೃಷ್ಣ ಗೋವಿಂದ್ ಗೋಪಾಲ್ ಗಾತೇ ಚಲೋ।**
**ನಾಮ್ ಜಪತೇ ರಹೋ ಕಾಮ್ ಕರತ್ ರಹೋ।**

ಎಂದು ಸಾರಿದರು.

ನಾವು ಯಾವುದೇ ಕೆಲಸವನ್ನು ಮಾಡುವಾಗಲೂ ಪ್ರೇರಕನಾದ ಭಗವಂತನ ಎಚ್ಚರಿಕೆ ಇರಬೇಕು. ಅವನಲ್ಲಿ ಶ್ರದ್ಧೆ ಇರಬೇಕು. ಕನಿಷ್ಠ ಪಕ್ಷ ಕೆಲಸದ ಕ್ಷಣದಲ್ಲಾದರೂ ಅವನ ನಾಮಸ್ಮರಣೆಯಾದರೂ ಇರಬೇಕು. ಇದರಿಂದ ನಮ್ಮ ಎಂತಹ ಕೆಲಸಗಳೂ ಭಗವತ್ಪೂಜೆಗಳಾಗುವುವು ಅದಕ್ಕೆ ಅಗತ್ಯವಾದದ್ದು ನಮ್ಮ ಶ್ರದ್ಧೆ, ಅನುಸಂಧಾನ.

ದಿನದ 24 ಗಂಟೆಗಳಲ್ಲಿ ಮಾಡುವ ಅನೇಕ ಕಾರ್ಯಗಳಲ್ಲಿ ಕೆಲವನ್ನಾದರೂ ವಿಶೇಷ ಚಿಂತನದೊಂದಿಗೆ ಹರಿಪೂಜೆ ಅಥವಾ ಯಜ್ಞವನ್ನಾಗಿಸಲು ಪ್ರಯತ್ನಿಸೋಣ.

ಶ್ರೀಮದಾಚಾರ್ಯರು ಸದಾಚಾರಸ್ಮೃತಿಯಲ್ಲಿ

**'ಸ್ಮೃತ್ವಾ ವಿಷ್ಣುಂ ಸಮುತ್ಥಾಯ.......'**

ಎಂದು ವಿಷ್ಣುವನ್ನು ಸ್ಮರಿಸುತ್ತಲೇ ಏಳು ಎಂಬ ಆದೇಶವನ್ನು ನೀಡಿರುವರು. ಮಲಗಿದವನು

ಏಳಲೇ ಬೇಕು. ಆದರೆ ಆ ಏಳುವಿಕೆ ವ್ಯರ್ಥವಾಗದಂತೆ ಹರಿಸ್ಮರಣೆಯೊಂದಿಗೇ ಏಳಲೇಬೇಕು. ಅದಕ್ಕಾಗಿ ಹಿರಿಯರು ಏಳುತ್ತಲೇ 'ನಾರಾಯಣ ನಾರಾಯಣ' ಎಂದು ಉಚ್ಚರಿಸುತ್ತಿದ್ದರು. ಅದರಂತೆ ನಾವೂ ಹಾಸಿಗೆಯಿಂದ ಏಳುವಾಗ ಅದಕ್ಕೂ ಮುಂಚಿತವಾಗಿ ಮಲಗಿದ್ದಾಗಲೇ ಎಚ್ಚರಿಕೆ ಬಂದ ತಕ್ಷಣದಲ್ಲಿ ಹರಿಯನ್ನು ಸ್ಮರಿಸಬೇಕು. ಆ ಏಳುವ ಘಳಿಗೆಯನ್ನೂ, ಕಾರ್ಯವನ್ನೂ ನಮ್ಮ ಏಳಿಗೆಗಾಗಿ ಬಳಸಬೇಕು.

ಯಾವುದೇ ಕಾಲದಲ್ಲಿ, ಯಾವುದೇ ಕಾರ್ಯದಲ್ಲಿ ಭಗವನ್ನಾಮವನ್ನು ಉಚ್ಚರಿಸುವಾಗ, ಸ್ಮರಿಸುವಾಗ 'ಭಾರತೀರಮಣ ಮುಖ್ಯಪ್ರಾಣಾಂತರ್ಗತ' ಎಂಬ ಅನುಸಂಧಾನ ಮಾತ್ರ ತಪ್ಪಬಾರದು. ಅತ್ಯಂತ ಶುದ್ಧ ಅಧಿಷ್ಠಾನರಾದ ವಾಯುದೇವರ ಅಂತರ್ಯಾಮಿಯ ಚಿಂತನೆಯಿಂದ ಕಾರ್ಯ, ಅದರ ಫಲಗಳು ದೈತ್ಯರ ಪಾಲಾಗುವುದಿಲ್ಲ. ಆದ್ದರಿಂದ ಬೆಳಿಗ್ಗೆ ಏಳುವ ವ್ಯಕ್ತಿ ' ಭಾರತೀರಮಣಮುಖ್ಯಪ್ರಾಣಾಂತರ್ಗತ/ಮಧ್ವಾಂತರ್ಗತ ಶ್ರೀನಾರಾಯಣಾಯ ನಮಃ' ಎಂದು ಸ್ಮರಿಸಬೇಕು.

ಎದ್ದ ನಂತರ ನಾವು ನಮ್ಮ ದೇಹದ ಶುದ್ಧಿಗಾಗಿ, ರಕ್ಷಣೆಗಾಗಿ ಅನೇಕ ಕಾರ್ಯಗಳನ್ನು ಮಾಡುವುದಿದೆ. ಮೊದಲನೆಯದಾಗಿ ಮಲ-ಮೂತ್ರ ವಿಸರ್ಜನೆ. ಎಲ್ಲರೂ ಅಸಹ್ಯ ಪಡುವಕಾರ್ಯ ಎಂದೆನಿಸಿದರೂ ಎಲ್ಲರಿಗೂ ಅನಿವಾರ್ಯವಾದುದೂ ಕೂಡ. ಆ ಕಾಲದಲ್ಲಿ **' ಅಪಾನಾಂತರ್ಗತ ಕೇಶವಾಯ ನಮಃ'** ಎಂದು ಸ್ಮರಿಸಬೇಕು. ಮಲ-ಮೂತ್ರವಿಸರ್ಜನೆಯ ನಂತರ ಆಶ್ರಮಧರ್ಮಕ್ಕನುಗುಣವಾಗಿ ಮೃತ್ತಿಕಾಶೌಚವನ್ನು ಮಾಡಬೇಕು. ಈ ಮೃತ್ತಿಕಾ ಶೌಚವಿಲ್ಲದೆ ಮಾಡಿದ ಯಾವ ಸತ್ಕರ್ಮಗಳೂ ಭಗವತ್ಪ್ರೀತಿಕರ ಹಾಗೂ ಫಲಪ್ರದವಾಗುವುದಿಲ್ಲ. ಆದ್ದರಿಂದ ತಪ್ಪದೇ ಮೃತ್ತಿಕಾಶೌಚವನ್ನು ಆಚರಿಸಬೇಕು. ಆ ಕಾಲದಲ್ಲಿ ' ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀ ತ್ರಿವಿಕ್ರಮಾಯ ನಮಃ' ಎಂದು ಸ್ಮರಿಸಬೇಕು.

ಆ ನಂತರ ನಮ್ಮ ದೇಹದ ಶುದ್ಧಿಗಾಗಿ ಹಲ್ಲುಗಳನ್ನು ಉಜ್ಜುತ್ತೇವೆ. ಕಣ್ಣಿನಲ್ಲಿರುವ ಪಿಚ್ಚನ್ನು ತೆಗೆಯುತ್ತೇವೆ. ಕಿವಿಯಲ್ಲಿರುವ ಹೊಲಸನ್ನು ತೆಗೆಯುತ್ತೇವೆ. ಆ ಕಾಲದಲ್ಲಿ ' ಶ್ರೀ ಹರಯೇ ನಮಃ' ಎಂದು ಸ್ಮರಿಸಬೇಕು. ಮುಖವನ್ನು ತೊಳೆಯುವಾಗ 'ಶ್ರೀ ಮಾಧವಾಯ ನಮಃ' ಎಂದು ಸ್ಮರಿಸಬೇಕು. ಈ ರೀತಿ ಭಗವತ್ಸ್ಮರಣಪೂರಕವಾಗಿ ದೇಹದ ಕೊಳೆಯನ್ನು ತೆಗೆದು 'ದೇಹವೆಂಬ ಭಗವನ್ಮಂದಿರದ ಸಮ್ಮಾರ್ಜನೆ' ಎಂದು ಭಾವಿಸಿದರೆ ಈ ಮಲ-ಮೂತ್ರ ವಿಸರ್ಜನೆ, ಮೃತ್ತಿಕಾಶೌಚ, ದಂತಧಾವನ, ಗಂಡೂಷ ಮುಖತೊಳೆಯುವಿಕೆ ಇವೆಲ್ಲವೂ ಭಗವದ್ಪೂಜೆಯೇ ಹರಿಯಜ್ಞವೇ ಎಂದು ಶ್ರೀಜಗನ್ನಾಥದಾಸರು ನಿರೂಪಿಸಿದರು.

ದೈನಂದಿನ ಚಟುವಟಿಕೆಗಳಲ್ಲಿ ಪ್ರಧಾನವಾದುದರಲ್ಲಿ ಸ್ನಾನವು ಮೊದಲನೆಯದು.

ಅದರ ಬಗ್ಗೆ ಹಿರಿಯ ಸಾಧಕರ ಮಾರ್ಗದರ್ಶನದಲ್ಲಿ ಸ್ವಲ್ಪ ತಿಳಿಯೋಣ. ಮುನ್ನಡೆಯೋಣ. 'ಸ್ನಾನವೆನ್ನುವುದು ನಮ್ಮ ದೇಹದ ಮಾಲಿನ್ಯವನ್ನು ಪರಿಹರಿಸುವ ಒಂದು ಸಹಜ ಕ್ರಿಯೆ. ಇದು ಇಲ್ಲದೆ ನಮಗೆ ಯಾವ ಕರ್ಮಾಧಿಕಾರವೂ ಇಲ್ಲ. ಅಷ್ಟೇ ಅಲ್ಲದೆ ಸ್ನಾನವಿಲ್ಲದೆ ಆಹಾರ ಸ್ವೀಕಾರ ಮೊದಲಾದವುಗಳಿಗೂ ನಮ್ಮ ಮನಸ್ಸು ಒಪ್ಪುವುದಿಲ್ಲ. ಸ್ನಾನವೇ ಎಲ್ಲ ಕರ್ಮಾಧಿಕಾರವನ್ನು ತಂದುಕೊಡುವುದು. ಇಂತಹ ಸ್ನಾನವಿಧಿಯನ್ನು ಧರ್ಮಶಾಸ್ತ್ರಕಾರರು ಅನೇಕ ವಿಧವಾಗಿ ಸೂಚಿಸಿರುವರು. ಸತ್ಕರ್ಮಾನುಷ್ಠಾನಿಗಳು ಅದೆಲ್ಲವನ್ನು ತಪ್ಪದೆ ಪಾಲಿಸುವರು. ಆ ಎಲ್ಲ ವಿಧಿಗಳಲ್ಲೂ ಇರಲೇ ಬೇಕಾದ ಅನುಸಂಧಾನವನ್ನು ಹಾಗೂ ಸ್ನಾನಸಂಕಲ್ಪವನ್ನೂ ಶ್ರೀಗುರುಜಗನ್ನಾಥದಾಸರು ನಿರ್ದೇಶಿಸಿರುವರು. ಸ್ನಾನಕಾಲದಲ್ಲಿ ನಾವು ಸಂಕಲ್ಪವನ್ನು ಮಾಡುತ್ತೇವೆ. ಆ ಸಂಕಲ್ಪಕ್ಕೆ ಪೋಷಕವಾಗಿ ಇನ್ನೂ ಹೆಚ್ಚಿನ ಭಾವುಕತೆಯನ್ನು ಪೂರ್ಣತೆಯನ್ನು ನೀಡುವುದು ಶ್ರೀಗುರುಜಗನ್ನಾಥದಾಸರು ದರ್ಶಿಸಿದ ವಿಶಿಷ್ಟ ಸ್ನಾನಸಂಕಲ್ಪ.

ಸ್ನಾನಪೂರ್ವದಲ್ಲಿ ಆಚಮನವನ್ನು ಮಾಡಿ ಶಾಸ್ತ್ರೀಯ ಸಂಕಲ್ಪವನ್ನಾರಂಭಿಸಿ ದೇಶ ಕಾಲಾದಿಗಳನ್ನುಚ್ಚರಿಸಿದ ನಂತರ ಶ್ರೀಗುರುಜಗನ್ನಾಥದಾಸರು ನೀಡಿದ ಸಂಕಲ್ಪವನ್ನು ಮುಂದುವರೆಸಬೇಕು.

ಭಗವದ್ರೂಪಾನುಸಂಧಾನಪೂರ್ವಕ ಸ್ನಾನ ಸಂಕಲ್ಪ–

ಸಾರ್ಧತ್ರಿಕೋಟಿತೀರ್ಥಾಂತರ್ಯಾಮಿ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ನಾರಾಯಣಾತ್ಮಕ– ಗಂಗಾಂತರ್ಯಾಮಿ ಮಾಧವರೂಪಾತ್ಮಕ – ಗೋದಾವರ್ಯಂತರ್ಯಾಮಿ ನಾರಾಯಣರೂಪಾತ್ಮಕ– ಕೃಷ್ಣಾಂತರ್ಯಾಮಿ ಕೃಷ್ಣರೂಪಾತ್ಮಕ–ಸರಸ್ವತ್ಯಂತರ್ಯಾಮಿ ಪದ್ಮನಾಭರೂಪಾತ್ಮಕ–ಕಾವೇರ್ಯಂತರ್ಯಾಮಿ ರಂಗನಾಥರೂಪಾತ್ಮಕ– ನರ್ಮದಾಂತರ್ಯಾಮಿ ವಿಷ್ಣುರೂಪಾತ್ಮಕ– ತುಂಗಭದ್ರಾಂತರ್ಯಾಮಿ ವರಾಹರೂಪಾತ್ಮಕ–ಸಮುದ್ರಾಂತರ್ಯಾಮಿ ಕ್ಷೀರಾಬ್ಧಿಶಾಯಿ ಪದ್ಮನಾಭಾತ್ಮಕ– ಭವನಾಶಿನ್ಯಂತರ್ಯಾಮಿ ನರಹರಿರೂಪಾತ್ಮಕ–ಕುಮುದ್ವತ್ಯಂತರ್ಯಾಮಿ ತ್ರಿವಿಕ್ರಮರೂಪಾತ್ಮಕ– ಮಂಜುಲಾಂತರ್ಯಾಮಿ ಹಯಗ್ರೀವರೂಪಾತ್ಮಕ– ಭೀಮರಥ್ಯಂತರ್ಯಾಮಿ ನರಸಿಂಹರೂಪಾತ್ಮಕ– ತಾಮ್ರಪರ್ಣ್ಯಂತರ್ಯಾಮಿ ಅನಂತರೂಪಾತ್ಮಕ–ಮಲಾಪಹಾಂತರ್ಯಾಮಿ ಚಕ್ರಪಾಣಿರೂಪಾತ್ಮಕ –ಸ್ನಾತುಃ ಪುರುಷಸ್ಯ ಶರೀರಾಂತರ್ಯಾಮಿ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ವಾಸುದೇವ ನಾರಾಯಣಾತ್ಮಕ– ದ್ವಾಸಪ್ತತಿ ಸಹಸ್ರನಾಡ್ಯಂತರ್ಗತ ಬೃಹತೀಸಹಸ್ರಸ್ವರವ್ಯಂಜನಪ್ರತಿಪಾದ್ಯ–ದ್ವಾಸಪ್ತತಿ ಸಹಸ್ರಸಂಖ್ಯಾವಿಶಿಷ್ಟವಿಶ್ವಾದಿ ಸಹಸ್ರರೂಪಾತ್ಮಕ– ಪಂಚಕೋಶಸ್ಥ ಅನ್ನಮಯ, ಪ್ರಾಣಮಯ,

ವಿಜ್ಞಾನಮಯ, ಮನೋಮಯ, ಆನಂದಮಯರೂಪಾತ್ಮಕ– ಚತುರ್ವಿಂಶತಿ ತತ್ತ್ವಾಂತರ್ಯಾಮಿ ಕೇಶವಾದಿಚತುರ್ವಿಂಶತಿರೂಪಾತ್ಮಕ– ಅಸ್ಥ್ಯಂತರ್ಗತ ಆದಿನಾರಾಯಣ ಶಬ್ದವಾಚ್ಯ ಹಂಸರೂಪಾತ್ಮಕ–ಮಜ್ಜಾಂತಸ್ಥ ವಷಟ್ಕಾರಾಖ್ಯ ವಾಸುದೇವಾಭಿನ್ನಸಾರರೂಪಾತ್ಮಕ–ಮೇದಾಂತಸ್ಥ ನಿಧನಾಖ್ಯ ನಾರಾಯಣಾಭಿನ್ನ ಷಡ್ಗುಣರೂಪಾತ್ಮಕ– ಮಾಂಸಾಂತರ್ಗತ ಪ್ರತೀಹಾರಾಖ್ಯ ಸಂಕರ್ಷಣರೂಪಾತ್ಮಕ– ತ್ವಗಂತಸ್ಥಪ್ರಸ್ಥಾವಾಖ್ಯ ಅನಿರುದ್ಧಾಭಿನ್ನ ರಾಮರೂಪಾತ್ಮಕ– ರೋಮಕೂಪಾಂತಸ್ಥ ಪ್ರದ್ಯುಮ್ನಾಭಿನ್ನ ಸಂಕರ್ಷಣರೂಪಾತ್ಮಕ– ದಶೇಂದ್ರಿಯಸ್ಥ ಮತ್ಸ್ಯಾದಿ ದಶರೂಪಾತ್ಮಕ– ಅಜಾದಿ ಪಂಚಾಶದ್ರೂಪಾತ್ಮಕ– ಸರ್ವಶರೀರಾಂತಸ್ಥ ಪುರುಷರೂಪಾತ್ಮಕ–ಮಮ ಹೃದಯಾಂತರ್ಯಾಮಿ ಭಾರತೀರಮಣಮುಖ್ಯಪ್ರಾಣಾಂತರ್ಗತ ವಿಶ್ವ, ತೈಜಸ, ಪ್ರಾಜ್ಞ, ತುರೀಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮೇತ್ಯಷ್ಟರೂಪಾತ್ಮಕ ಸಕಲ ಭಗವದ್ರೂಪಾಣಾಂ–ಮಮಹೃದಯಾಂತರ್ಯಾಮಿ ಭಾರತೀರಮಣಮುಖ್ಯಪ್ರಾಣಾಂತಸ್ಥ ಬಿಂಬರೂಪೇಣ ಐಕ್ಯ ಚಿಂತನಪೂರ್ವಕಂ ಭಗವತಃ ಮಂದಿರ ಭೂತಸ್ಯ ಅಸ್ಯ ದೇಹಸ್ಯ ಪ್ರಕ್ಷಾಲನಾತ್ಮಕಂ ಪ್ರಾತಃ ಸ್ನಾನಮಹಂ ಕರಿಷ್ಯೇ ॥ ತಥಾ ಮದ್ದೇಹಸ್ಥ ಸಮಸ್ತ ಭಗವದ್ರೂಪಾಣಾಂ ಅಭಿಷೇಚನಾಖ್ಯಂ ಕರ್ಮಕರಿಷ್ಯೇ' ಎಂದು ಸಂಕಲ್ಪಿಸಿ ಸ್ನಾನವನ್ನು ಮಾಡಬೇಕು. ★

---

(....7ನೇ)

ಫಲವಾಗಿ ಅದರ ಪುಣ್ಯ ದೂರದ ಪರಲೋಕಗಳಿಗೂ ಹರಡಿ ಎಲ್ಲೆಡೆ ಸುಗಂಧಮಯವಾಗಿಸುತ್ತದೆ. ಅವನ್ನು ಪರಿಮಳಗಳ ಸುಗಂಧಲೇಪನವೆಂದು ಬಗೆದು ನೀನು ಸ್ವೀಕರಿಸು.

'ಸಂಚಿತ ಅಸುಕರ್ಮ' ಎಂದೂ ಬಿಡಿಸಬೇಕು. ಕನ್ನಡದ ಲೋಪಸಂಧಿ. ದಾಸರಾಯರು ಏಕೆ ಹಾಗೆ ಸಂಧಿಮಾಡಿ ಅಕಾರವನ್ನು ಮರೆಮಾಡಿ ಹೇಳಿದರು? ಎಂದರೆ, ಅವರು ಮೆತ್ತಗೆ ಪಿಸುದನಿಯಲ್ಲಿ ಹೇಳುತ್ತಿದ್ದಾರೆ. 'ಶ್ರೀಹರಿ, ನನ್ನ ಅ–ಸುಕರ್ಮ, ದುಷ್ಕರ್ಮದಿಂದ ಕೋಪ ಬರಲಿಲ್ಲ ತಾನೆ? ಏಕೆ ಕೋಪ? ನೀನೇ ಮಾಡಿಸಿದ ಕರ್ಮ–ನಿನಗೇ ಅರ್ಪಿತ ಮಾಡುತ್ತೇನೆ. ಹಾಗೆ ಮಾಡದೆ ನಾನೇ ಮಾಡಿದೆನೆಂದುಕೊಂಡರೆ ಇನ್ನಷ್ಟು ಪಾಪಕರವಾದೀತು. ಅದರಿಂದ ನಿನಗೆ ಅರ್ಪಿಸಿ, 'ನನ್ನ ಪೂರ್ವಕರ್ಮಾನುಸಾರ ನೀ ಮಾಡಿಸಿದೆ, ಇನ್ನು ಸಾಕು. ಅದನ್ನು ಮೆಟ್ಟಿ, ತಿರುಗಿ ಪಾಪಕರ್ಮ ಹುಟ್ಟದಂತೆ ಮಾಡು' ಎನ್ನುತ್ತೇನೆ'. ('ಪಾಪಕರ್ಮವು ಪಾದುಕೆಗಳು, ಅನುಲೇಪನವು ಸತ್ಪುಣ್ಯ' ಎಂದು ಶ್ರೀಜಗನ್ನಾಥದಾಸರು ಹೇಳಿದ್ದೂ ಇದನ್ನೇ) ★

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

ಸ್ವಲ್ಪ ಹೊತ್ತಿನಲ್ಲಿ ಚೇತರಿಸಿ ಹರಿಶ್ಚಂದ್ರ ಶೈಬ್ಯೆ ಪರಸ್ಪರ ಆಲಂಗಿಸಿ ಮಗನನ್ನು ಎಣಿಸಿ ರೋದಿಸಿದರು. ತಂದೆಯಾಗಿ ಎಳವೆಯಲ್ಲಿಯೇ ರಕ್ಷಣೆ ನೀಡಬೇಕಾದ ನಾನು ನಿನ್ನನ್ನು ಕ್ರಯಕ್ಕೆ ಮಾರುವ ಶತ್ರುವಾದೆ. ನಿನ್ನ ತಂದೆಯೆನಿಸಲಿಲ್ಲ. ಯಾರು ರಕ್ಷ್ಯರೋ ಅವರನ್ನು ಮಾರಿ ಬದುಕಿದೆ. ನನ್ನ ಜನ್ಮಕ್ಕೆ ಧಿಕ್ಕಾರ. ಸ್ವಪ್ನವೂ ಸತ್ಯವಾಗಿ ಹೋಯಿತೇ. ಸತ್ಯವಂತನನ್ನು ಈ ರೀತಿಯಾಗಿ ದೇವತೆಗಳು ಶಿಕ್ಷಿಸುವುದೇ? ಧರ್ಮಕ್ಕೆ ಬೆಲೆಯಿಲ್ಲವೇ ಎಂದು ಶೈಬ್ಯೆಯು ಹಲುಬಿದಳು. ಹೀಗೆ ನಾನಾ ಪ್ರಕಾರವಾಗಿ ಇಬ್ಬರೂ ಅತ್ತು ಕೊನೆಗೆ ಈ ರೀತಿ ತೀರ್ಮಾನಕ್ಕೆ ಬಂದರು. ಯಮನ ತುತ್ತಿನಲ್ಲಿ ನಾವೂ ಸೇರೋಣ ಎಂದು ಚಿತೆಯನ್ನು ರಚಿಸಿ ಮಗನ ಶವವನ್ನು ತೊಡೆಯಲ್ಲಿರಿಸಿ ಪತ್ನಿ ಸಮೇತವಾಗಿ **'ಚಿಂತಯನ್ ಪರಮಾತ್ಮಾನಂ ಈಶಂ ನಾರಾಯಣಂ ಹರಿಂ'** ಎಂದು ಧ್ಯಾನಿಸುತ್ತಾ ಆತ್ಮದಹನಕ್ಕೆ ಪ್ರಯತ್ನ ಮಾಡುವ ಹರಿಶ್ಚಂದ್ರನನ್ನು ಧರ್ಮನೇ ಮೊದಲಾದ ದೇವತೆಗಳು ತಡೆದರು. ಮುಕ್ತ ಕಂಠದಿಂದ ಅವನ ತ್ಯಾಗವನ್ನು ಪ್ರಶಂಸಿಸಿದರು. ವಿಶ್ವಾಮಿತ್ರರು ನಿನ್ನ ಮೇಲೆ ಅನುಗ್ರಹವನ್ನೇ ತೋರಿದ್ದಾರೆ. ಚಂಡಾಲನಾಗಿ ನಿನ್ನನ್ನು ಪರೀಕ್ಷಿಸಿದವ ನಾನೇ ಎಂದ ಧರ್ಮರಾಜ. ನಿನ್ನ ಮಗ ಮತ್ತೆ ಬದುಕಿದ್ದಾನೆ ಎಂದಾಗ ನಿದ್ದೆಯಿಂದೆಚ್ಚತ್ತಂತೆ ರೋಹಿತ ಎದ್ದು ಕುಳಿತ. ದೇವತೆಗಳು ಕುಸುಮ ವೃಷ್ಟಿಯನ್ನು ಸುರಿಸಿದರು.

## ಸ್ವರ್ಗದ ಬಾಗಿಲು ತೆರೆಯಿತು

ಆಗ ಇಂದ್ರನೆಂದ ನಿನಗೆ ಸ್ವರ್ಗದ ಬಾಗಿಲು ತೆರೆದಿದೆ. ಈಗಾಗಲೇ ಸ್ವರ್ಗದ ಭೋಗಕ್ಕೆ ಭಾಗಿಯಾಗು. ಆಗ ಹರಿಶ್ಚಂದ್ರ ನನ್ನ ದುಃಸ್ಥಿತಿಗೆ ಸ್ಪಂದಿಸಿದ. ನನ್ನವರಾದ ಕೋಸಲದ ಪ್ರಜೆಗಳನ್ನು ಬಿಟ್ಟುಬರಲಾರೆ. ದುಃಖದಲ್ಲಿ ಭಾಗಿಗಳಾದ ಅವರನ್ನು ಬಿಟ್ಟು ಸುಖವನ್ನುಣ್ಣುವುದಕ್ಕೆ ನಾನೊಬ್ಬನೇ ಮನಮಾಡಿದರೆ ನನ್ನಂತಹ ಕೃತಘ್ನ ಬೇರಾರಿದ್ದಾರೆ ಎಂದು ನಯವಾಗಿ ಇಂದ್ರನ ಮಾತನ್ನು ಪ್ರಶ್ನಿಸಿದ. **'ಅನಾರೋಕ್ಷ್ಯೇ ಸುರಾಲಯಂ'** ಎಂದು ಖಂಡಿತವಾದಿಯಾಗಿ ನುಡಿದ. ಆಗ ಇಂದ್ರ ಇಂತೆಂದ ನಿನ್ನ ಪುಣ್ಯಕರ್ಮದ ಫಲವಾಗಿ ನಾಕವನ್ನು ಅನುಭವಿಸುವೆ. ನಾವು ಅನುಭವಿಸುವ ಸುಖ–ದುಃಖ ಅದು ನಮ್ಮದೇ ಕರ್ಮದ ಪ್ರತಿಫಲ. ಆದ್ದರಿಂದ ನೀನೀಗ ನಿನ್ನ ಪುಣ್ಯಕರ್ಮದ ಫಲವಾಗಿ ಸ್ವರ್ಗವನ್ನು ಸೇರು. ನಿನ್ನ ಪ್ರಜೆಗಳು ಅವರ ಕರ್ಮಕ್ಕೆ ಸರಿಯಾಗಿ ಸುಖವನ್ನು ಪಡೆಯಲಿ. ಆಗ

ಹರಿಶ್ಚಂದ್ರ ಈ ಮಾತು ಹೇಳಿದ ರಾಜನಾದ ನಾನು ಪುಣ್ಯ ಸಂಪಾದಿಸಿದ್ದು ಪ್ರಜೆಗಳ ಕಂದಾಯದ ಹಣದಿಂದ. ಆದ್ದರಿಂದ ನಾನು ಮಾಡಿದ ಪುಣ್ಯದಲ್ಲಿ ಅವರೂ ಭಾಗಿಗಳು. ಅವರು ಮಾಡಿದ ಪಾಪದಲ್ಲಿ ನಾನೂ ಭಾಗಿ. ಆದ್ದರಿಂದ ಅವರಿಗಾವ ಗತಿಯು ಅದೇ ಗತಿ ನನಗಾಗಲಿ ಎಂದು ಪಟ್ಟು ಹಿಡಿದಾಗ ಅವನ ಈ ಧರ್ಮನಿಷ್ಠೆಯನ್ನು ನೋಡಿ ದೇವತೆಗಳು ಪ್ರಸನ್ನರಾಗಿ ಎಲ್ಲರೂ ಸ್ವರ್ಗಕ್ಕೆ ಕರೆ ಕೊಟ್ಟರು. **'ಆಗಚ್ಚತಯೇ ಜನಾಃ ಶೀಘ್ರಂ ಸ್ವರ್ಗಲೋಕಂ ಸುದುರ್ಭಲಂ'** ಹೀಗೆ ದಿವ್ಯವಿಮಾನಗಳಲ್ಲಿ ಪ್ರಜಾಜನ ಸಮೇತನಾಗಿ ರೋಹಿತಾಶ್ವನನ್ನು ಪಟ್ಟದಲ್ಲಿ ಅಭಿಷೇಕ ಮಾಡಿ ಸ್ವರ್ಗವನ್ನು ಸೇರಿದ. ಇದು ಸತ್ಯಹರಿಶ್ಚಂದ್ರನ ಪುಣ್ಯಕಥೆ ಎಂದು ಪಕ್ಷಿಗಳು ಜೈಮಿನಿಗಳಿಗೆ ಹೇಳಿದವು.

## ಪುರೋಹಿತರ ಜಗಳ

ತನ್ನ ಶಿಷ್ಯ ಹರಿಶ್ಚಂದ್ರ ವಿಶ್ವಾಮಿತ್ರರಿಂದ ಶೋಷಣೆಗೆ ಒಳಗಾದುದನ್ನು ಕೇಳಿ ಪುರೋಹಿತರಾದ ವಸಿಷ್ಠರು ಕನಲಿ ಕೆಂಡವಾದರು. ಶಿಷ್ಯನ ರಾಜ್ಯಕೋಶವನ್ನು ಕಬಳಿಸಲೆತ್ನಿಸಿದ ವಿಶ್ವಾಮಿತ್ರನಿಗೆ 'ಬಕಪಕ್ಷಿ'ಯಾಗೆಂದು ಶಾಪವನ್ನಿತ್ತರು. ಪ್ರತಿಯಾಗಿ ವಿಶ್ವಾಮಿತ್ರರು ವಸಿಷ್ಠಗೆ ಅಡಿ (ಮರುಕುಟಿಗ) ಯಾಗು ಎಂದು ಶಾಪವನ್ನಿತ್ತರು. ಪರಸ್ಪರ ಶಪ್ತರಾದ ವಸಿಷ್ಠ ವಿಶ್ವಾಮಿತ್ರರು ಆಡಿ ಮತ್ತು ಬಕಗಳಾಗಿ ಆ ದೇಹದಲ್ಲೂ ಜಗಳವಾಡುತ್ತಿದ್ದರು. ಭೀಕರವಾದ ಅವರ ಯುದ್ಧದಿಂದ ಜನ ನೆಮ್ಮದಿ ಕಳೆದುಕೊಂಡರು. ಜನರ ಹಿತವನ್ನು ಬಯಸಬೇಕಾದ ಪುರೋಹಿತರೇ ಕಚ್ಚಾಟವಾಡಿದರೆ ಜನತೆಗೆ ನೆಮ್ಮದಿ ಎಲ್ಲಿಂದ? ಕೊನೆಗೆ ಪಿತಾಮಹರಾದ ಬ್ರಹ್ಮದೇವರು ಮಧ್ಯವರ್ತಿಗಳಾಗಿ ತಿಳಿ ಹೇಳಿ ಶಾಪೋಪಸಂಹಾರ ಮಾಡಿಕೊಂಡು ಜನತೆಯ ಅಭ್ಯುದಯಕ್ಕೆ ಪ್ರಯತ್ನಿಸಿ ಎಂದು ಹೇಳಿದಾಗ ತಮ್ಮ ಸಣ್ಣತನದರಿವಾಗಿ ಋಷಿವರಿಷ್ಠರಾದ ವಸಿಷ್ಠರು ಮತ್ತು ವಿಶ್ವಾಮಿತ್ರರು ಲೋಕ ರಕ್ಷಣ ದೀಕ್ಷಿತರಾದರು.

ಮತ್ತೆ ಪಕ್ಷಿಗಳಲ್ಲಿ ಜೈಮಿನಿಗಳು ಕೇಳಿದರು. ಎಲೈ ತಾಪಸರೇ ಹಿಂದು ಮುಂದು ಗೊತ್ತಿರದ ಇಂದಿನ ಸ್ಥಿತಿಯೂ ಪ್ರಶ್ನಾರ್ಹವೇ! ಆದ್ದರಿಂದ ಜೀವಿಗಳ ಹುಟ್ಟು, ಬೆಳವಣಿಗೆ, ಮರಣ, ಮರಣದ ಬಳಿಕ ಅವನ ಸ್ಥಿತಿ, ನಾವು ತಿಂದ ಘನ ಆಹಾರಗಳು ಜಠರಾಗ್ನಿಯಲ್ಲಿ ಕರಗಿ ಹೋಗುವಾಗ ಜೀವ ಪಚನವಾಗದೆ ಸ್ಥೂಲಶರೀರವನ್ನು ಪಡೆಯುವುದು ಅಚ್ಚರಿಯ ವಿಚಾರ. ಶುಭಾಶುಭಕರ್ಮ. ಫಲವನ್ನುಣ್ಣುವ ಪರಲೋಕದ ಬಗೆಗೂ ನನ್ನಲ್ಲಿ ಮೂಡಿದ ಸಂಶಯವನ್ನು ಪರಿಹರಿಸಬೇಕು ಎಂದಾಗ, ಹಿಂದೆ ಸುಮತಿ ಎಂಬ ಅವಧೂತ ತನ್ನ ತಂದೆಗೆ ಹೇಳಿದ. ಇದೇ ವಿಚಾರವನ್ನು ಹೇಳುತ್ತೇವೆಂದು ಪಕ್ಷಿಗಳು ಆ ಕಥೆಯನ್ನು ಜೈಮಿನಿಗಳಿಗೊರೆದವು. **(ಸಶೇಷ)**

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಗೋಪಾಲದಾಸರು ತಮ್ಮ ಒಂದು ಸುಳಾದಿಯಲ್ಲಿ :–
ಭಕುತರು ಮಾಡಿದದೇ ನೀ ಮಾಡಿದುದಯ್ಯ
ಭಕುತರು ಆಡಿದ್ದೇ ನೀ ಆಡಿದುದಯ್ಯ ಗೋಪಾಲವಿಠಲಾ
ಎಂದು ಹೇಳಿದರು ಇವರ ಗುರುಗಳಾದ ವಿಜಯ ಪ್ರಭುಗಳು :

ಭಕುತರ ಬಾಯಿಯಿಂದ ಪೊರೆದಾಕ್ಷಣ ನುಡಿ
ಅಕಟಾ ಲಾಲಿಸುತಿಪ್ಪ ಓವಿಗನೇ
ಭಕುತರು ಮಾಡುವ ಚರಿತೆಯನ್ನು ನೋಡಿ
ಸುಖ ಬಡಿಸಿ ಹಿಗ್ಗಿ ನಗುವ ದಾತರ ದಾತಾ
ಭಕುತರು ಕೊಟ್ಟ ಮಾತಿಗೆ ಸಲೆ ಎನುತಲಿ
ಮುಕುಟವ ತೂಗುವ ಅಪ್ರಾಕೃತನೇ
ಭಕುತಿಪಾಶಕ್ಕೆ ಬಪ್ಪ ವಿಜಯವಿಠಲ ನಿನ್ನ
ಭಕುತ ವತ್ಸಲತನಗೆ ನಮೋ ನಮೋ ಎಂಬೆ ॥

ಎಂದು ವರ್ಣಿಸಿ ಶ್ರೀ ಹರಿ ತನ್ನ ಭಕ್ತರ ಮಾತುಗಳನ್ನು ಎಂದೂ ಸುಳ್ಳು ಮಾಡುವನಲ್ಲ ಎಂದು ಸಮರ್ಥಿಸಿರುವರು. ಕಾರಣ ಹರಿಯಲ್ಲಿ ಮನವಿರಿಸಿ ನುಡಿದ ವಾದಿರಾಜಾದಿ ಮಹಿತಾತ್ಮರ ಮಾತುಗಳು ಎಂದೂ ಸುಳ್ಳಾಗದು.

ವ್ಯಾಸರಾಜರು ಪುರಂದರದಾಸರ ಹಾಡುಗಳನ್ನು ಕನ್ನಡ ಹಾಡುಗಳೆಂದು ಕರೆಯದೆ 'ಪುರಂದರೋಪನಿಷತ್' ಎಂದು ಕರೆದು, ಅವುಗಳಿಗೆ ಉಪನಿಷತ್ ಸಾಮ್ಯವನ್ನು ಸಾಂಕೇತಿಕವಾಗಿ ಸಾರಿದರು. ಇಂಥಾ ಪುರಂದರದಾಸರ ಹಾಗೂ ವ್ಯಾಸರಾಜರ ಪ್ರೇರಣೆಯಂತೆ ರಚಿಸಲ್ಪಟ್ಟ ಹರಿಕಥಾಮೃತಸಾರದ ಔನ್ನತ್ಯವು ಎಷ್ಟಿರಬಹುದೋ ಸಜ್ಜನರು ಊಹಿಸಬಹುದು.

ಸ್ವತ! ಜಗನ್ನಾಥದಾಸರೇ ಅಲ್ಲಲ್ಲಿ ಹರಿಕಥಾಮೃತಸಾರದ ಹಿರಿಮೆಯನ್ನು ಹೇಳುತ್ತಾ ಅರಸಿ ಬಂದ ಕೈವಲ್ಯವನ್ನು ಜರಿದಂತೆ, ಪ್ರಾಕೃತ ಭಾಷೆಯಲ್ಲಿ ರಚಿತವಾದುದೆಂಬ ಭಾವನೆಯಿಂದ ಈ ಗ್ರಂಥವನ್ನು ತಿರಸ್ಕರಿಸಬೇಡಿ ಎಂದು ಸೂಚಿಸಿರುವರು. ಉದಾಃ

ಕೆಲವು ಪದ್ಯಗಳನ್ನು ನೋಡಬಹುದು.

ಮಳೆಯು ನೀರೋಣೀಯೋಳ್ಪರಿಯಲು
ಬಳಸರೂರೊಳಗಿದ್ದ ಜನರಾ
ಜಲವು ಹೆದ್ದೊರೆಗೂಡೆ ಮಜ್ಜನಪಾನಗೈದಪರು ।
ಕಲುಷವಚನಗಳಾದದೆಯು ಬಾಂ
ಬೊಳೆಯ ಪೆತ್ತನ ಪಾದ ಮಹಿಮಾ
ಜಲಧಿ ಮಾಣ್ದಪರೇ ಮಹೀಸುರರು ॥

ಕಬ್ಬಿನೊಳಗಿಹ ರಸ ವಿದಂತಸಿ
ಗಬ್ಬಬಲ್ಲುದೇ ಭಾಗ್ಯಯೌವನ
ಮಬ್ಬಿನಲಿ ಮೈಮರೆದವಗೆ ಈ ಹರಿಕಥಾಮೃತವು
ಲಭ್ಯವಾಗದು ಹರಿಪಾದಾಬ್ಜದಿ
ಹಬ್ಬಿದಲೆ ಸದ್ಭಕ್ತಿರಸ ಉಂಡ–
ದುಬ್ಬಿ ಕೊಬ್ಬಿ ಭವಾಬ್ಧಿಯೊಳ ಗಾಡುವ ಗಲ್ಲದಲೆ ॥

ಈ ಪದ್ಯದಲ್ಲಿ ದಾಸಾರ್ಯರು 'ಭಾಗ್ಯ'–'ಯೌವ್ವನಮಬ್ಬಿನಲಿ' ಎಂಬ ವಾಕ್ಯ ಪ್ರಯೋಗದಿಂದ ಕೇವಲ ತರ್ಕವ್ಯಾಕರಣಾದಿ ಶಾಸ್ತ್ರಾಧ್ಯಯನ ಮಾಡಿ, ಪಾಂಡಿತ್ಯದ ಹಮ್ಮಿನಲ್ಲಿ ಮೆರೆವವರನ್ನು ಸೂಚಿಸಿರುವರು. ಯೌವ್ವನವೆನ್ನುವುದು ಭಗವಂತನಿಂದ ಕೊಡಲ್ಪಟ್ಟ ಒಂದು ಸಹಜವಾದ ಅವಸ್ಥೆ. ಋಥಾ ಅವಸ್ಥೆ ಈ ಯೌವ್ವನದಲ್ಲಿರುವಾಗ ಭಗವಂತನನ್ನು ಕಾಣದೆ, ತದುಚಿತ ಜ್ಞಾನಿಜನ ಶ್ಲಾಘ್ಯಗಳಾದ ವ್ಯಾಪಾರಗಳನ್ನು ಮಾಡದೇ ಇದ್ದಲ್ಲಿ ಅದೇ ಅಹಂಕಾರ, ಅಜ್ಞಾನಗಳೆನಿಸುವುದು. ಇದರಂತೆ ಶಾಸ್ತ್ರಾಧ್ಯಯನವು ಸಹ ಭಗವಂತನನ್ನು ಕಾಣಲು ಕಾರಣವಾದಾಗ ಸಾರ್ಥಕವಾಗುವುದು. ಹಾಗಿಲ್ಲದಿದ್ದಲ್ಲಿ ಅಹಂಕಾರಕ್ಕೆ ಪ್ರತಿರೂಪವಾಗುವುದು.

**(ಸಶೇಷ)**

ಮುಖಪುಟಲೇಖನ

# ವಿಷ್ಣು

–ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

ಭಗವಂತನ ಕೇಶವಾದಿ ಮೂರ್ತಿಗಳಲ್ಲಿ ಐದನೆಯದ್ದು ವಿಷ್ಣುರೂಪ. ಭಗವಂತನ ಈ ವಿಷ್ಣುರೂಪವು ಚೈತ್ರಮಾಸದ ನಿಯಾಮಕ ರೂಪವಾಗಿದೆ. ಈ ವಿಷ್ಣುರೂಪಿ ಪರಮಾತ್ಮನು ಮೇಲಿನ ಬಲಗೈಯಲ್ಲಿ ಪದ್ಮವನ್ನು ಎಡಗೈಯಲ್ಲಿ ಶಂಖವನ್ನು ಕೆಳಗಿನ ಎಡಗೈಯಲ್ಲಿ ಚಕ್ರವನ್ನು ಬಲಗೈಯಲ್ಲಿ ಗದೆಯನ್ನು ಧರಿಸಿರುವವನು ಎಂದು ಶ್ರೀಮದಾಚಾರ್ಯರು ತಂತ್ರ ಸಂಗ್ರಹದಲ್ಲಿ ತಿಳಿಸಿದ್ದಾರೆ.

**'ವ್ಯಾಪಕತ್ವಾತ್ ವಿಷ್ಣುಃ'** ಎಲ್ಲಾ ಕಡೆ ವ್ಯಾಪಿಸಿದವನಾದ್ದರಿಂದ ಭಗವಂತನಿಗೆ ವಿಷ್ಣು ಎಂಬ ಹೆಸರು, **'ಅಥ ಕಸ್ಮಾದುಚ್ಯತೇ ಮಹಾವಿಷ್ಣುರಿತಿ ಯಸ್ಮಾತ್ ಸ್ವಮಹಿಮ್ನಾ ಸರ್ವಾನ್ ಲೋಕಾನ್ ಸರ್ವಾನ್ ದೇವಾನ್ ಸರ್ವಾನಾತ್ಮನಃ ಸರ್ವಾಣಿ ಭೂತಾನಿ ವ್ಯಾಪ್ನೋತಿ ವ್ಯಾಪಯತಿ'** ಎಂಬ ತಾಪನೀಯ ಶ್ರುತಿಯಲ್ಲಿ ಭಗವಂತನಿಗೆ ವಿಷ್ಣು ಎಂಬ ಹೆಸರು ಯಾಕೆ ಎಂದು ಪ್ರಶ್ನಿಸಿ ತನ್ನ ಸಾಮರ್ಥ್ಯದಿಂದಲೇ ಎಲ್ಲಾ ಲೋಕಗಳನ್ನು ಎಲ್ಲಾ ದೇವತೆಗಳನ್ನು ಎಲ್ಲ ಜೀವರಾಶಿಗಳನ್ನು ಎಲ್ಲಾ ಭೂತಗಳನ್ನೂ ಕೂಡ ವ್ಯಾಪಿಸಿದವನಾದ್ದರಿಂದ ಭಗವಂತನಿಗೆ ವಿಷ್ಣು ಎಂಬ ಹೆಸರು ಎಂದು ಉತ್ತರಿಸಿದೆ.

ವಿಷ್ಣು ಎಂಬ ಶಬ್ದದಲ್ಲಿ ವಿ+ಷ+ಣ++ಉ ಎಂಬ ನಾಲ್ಕು ಅಕ್ಷರಗಳಿವೆ. ಈ ನಾಲ್ಕು ಅಕ್ಷರಗಳ ಅರ್ಥವನ್ನು ಮೋಕ್ಷಧರ್ಮ ಎಂಬ ಗ್ರಂಥದಲ್ಲಿ ತಿಳಿಸಿದ್ದಾರೆ. ಅದು ಈ ರೀತಿಯಾಗಿದೆ.

**ವಿಶಿಷ್ಟ ಬಲ ಚೇಷ್ಟತ್ವಾತ್ ವಿಷ್ಣುರಿತ್ಯಭಿಧಾ ಹರೇಃ**
**ಪ್ರಾಣಂ ಬಲಂ ಷಕಾರಂಚ ಣಕಾರಂಚಾಹ ಹಿ ಶ್ರುತಿಃ**
**ಉಪಸರ್ಗತ್ವತೋ ವೇಸ್ತು ತಾಚ್ಛೀಲ್ಯಾರ್ಥಾದುನಸ್ತಥಾ**
**ಣಕಾರಶ್ಚ ಷಕಾರಶ್ಚ ನಾಮರೂಪತಯಾಮತೌ**

ವಿಶಿಷ್ಟವಾದ ಚೇಷ್ಟೆ ಮತ್ತು ವಿಶಿಷ್ಟವಾದ ಬಲವನ್ನು ಹೊಂದಿದ್ದರಿಂದ ಭಗವಂತನಿಗೆ ವಿಷ್ಣು ಎಂಬ ಹೆಸರು. ಈ ರೀತಿಯಾದ ಅರ್ಥ ಹೇಗೆಂದರೆ ನಂತರದ ಪಾದಗಳಲ್ಲಿ ತಿಳಿಸುತ್ತಾರೆ. **'ಣಕಾರೋ ಬಲಂ ಷಕಾರಃ ಪ್ರಾಣಾತ್ಮಾ'** ಎಂಬ ಶ್ರುತಿಯು 'ಷಕಾರಕ್ಕೆ' ಚೇಷ್ಟೆ ಎಂಬ ಅರ್ಥವನ್ನು 'ಣಕಾರಕ್ಕೆ' ಬಲ ಎಂಬ ಅರ್ಥವನ್ನು ತಿಳಿಸುತ್ತದೆ. ಉಪಸರ್ಗವಾದ ವಿಕಾರಕ್ಕೆ

ವಿಶಿಷ್ಟವಾದದ್ದು ಎಂದು ಅರ್ಥ. ಇನ್ನುಳಿದ 'ಉ' ಕಾರಕ್ಕೆ ಅದೇ ಶೀಲವಾಗಿವುಳ್ಳವನು ಎಂಬ ಅರ್ಥ ಎಂಬುದು ಈ ಮೋಕ್ಷಧರ್ಮ ವಾಕ್ಯದ ತಾತ್ಪರ್ಯ. ಒಟ್ಟಿಗೆ ವಿ=ವಿಶಿಷ್ಟವಾದ, ಷ=ಚೇಷ್ಟೆ, ಣ=ಬಲವೇ ಉ= ಶೀಲವಾಗಿವುಳ್ಳವನು ಎಂದು ಅರ್ಥ. ಅಂದರೆ ಆ ಬಲ ಮತ್ತು ಚೇಷ್ಟೆಗಳು ಭಗವಂತನಿಗೆ ಯಾರದೋ ಅನುಗ್ರಹದಿಂದ ಬಂದದ್ದಲ್ಲ ಅವನ ಸ್ವಾಭಾವಿಕ ಗುಣ ಎಂಬುದು ವಿಷ್ಣು ಶಬ್ದದಿಂದಲೇ ತಿಳಿಯುವುದು. ಇದೇ ರೀತಿ ವಿಷ್ಣು ಶಬ್ದಕ್ಕೆ ಅನೇಕ ಅರ್ಥಗಳಿವೆ.

ಶ್ರೀಮಧ್ವಾಚಾರ್ಯರು ದ್ವಾದಶಸ್ತೋತ್ರದಲ್ಲಿ ವಿಷ್ಣುರೂಪಿ ಪರಮಾತ್ಮನನ್ನು **'ವಿಷ್ಣೋ ಸೃಜಿಷ್ಣೋ ಗ್ರಸಿಷ್ಣೋ ವಿವಂದೇ ಕೃಷ್ಣ ಸದೃಷ್ಣ ವಧಿಷ್ಣೋ ಸುಧೃಷ್ಣೋ'** ಎಂದು ಸ್ತುತಿಸಿದ್ದಾರೆ. ಇಲ್ಲಿ ಆಚಾರ್ಯರು **'ಸುಧೃಷ್ಣೋ'** ಎಂಬ ವಿಶೇಣವನ್ನು ಕೊಟ್ಟಿದ್ದಾರೆ. ಅಂದರೆ ಎಲ್ಲಾ ಸತ್ಯ ಪ್ರಪಂಚನವನ್ನು ಧರಿಸಿದವನು ಎಂದರ್ಥ. ಎಲ್ಲಾ ಪ್ರಪಂಚವನ್ನು ಧರಿಸಬೇಕಾದರೆ ಅವನು ಸರ್ವತ್ರವ್ಯಾಪ್ತನಾಗಿರಬೇಕು. ಆದ್ದರಿಂದ ಈ 'ಸದೃಷ್ಣ' ಎಂಬ ವಿಶೇಷಣವನ್ನು ಪ್ರಯೋಗಿಸುವ ಮೂಲಕ ಶ್ರೀಮದಾಚಾರ್ಯರು ತಾಪನೀಯ ಶ್ರುತಿಯು ವಿಷ್ಣುಶಬ್ದಕ್ಕೆ ನೀಡಿದ ಸರ್ವತ್ರವ್ಯಾಪ್ತನಾದವನು ಎಂಬ ಅರ್ಥವನ್ನು ತಿಳಿಸಿದ್ದಾರೆ.

ಶ್ರೀಕನಕದಾಸರು– 'ಭ್ರಷ್ಟನೆನಿಸಬೇಡ ಕೃಷ್ಣ
ಇಷ್ಟು ಮಾತ್ರ ಬೇಡಿಕೊಂಬೆ
ಶಿಷ್ಟರೊಡನೆ ಇಟ್ಟು ಕಷ್ಟ ಬಿಡಿಸು ವಿಷ್ಣುವೇ' ಎಂದು ಸ್ತುತಿಸಿದ್ದಾರೆ.

ನಾವು ಶಿಷ್ಟ ಜನರ ಸಹವಾಸ ಮಾಡಿದರೆ ಶಿಷ್ಟರಾಗುತ್ತೇವೆ. ದುಷ್ಟರೊಡಗೂಡಿದರೆ ಭ್ರಷ್ಟರಾಗುತ್ತೇವೆ. ಆದ್ದರಿಂದ ದುಷ್ಟರೊಂದಿಗೆ ನನ್ನನ್ನೂ ಸೇರಿಸಿ ನನ್ನನ್ನು ಭ್ರಷ್ಟನನ್ನಾಗಿಸಬೇಡ. ಶಿಷ್ಟ ಜನರ ಜೊತೆಗೂಡಿಸಿ ಶಿಷ್ಟನನ್ನಾಗಿ ಮಾಡು ಎಂದು ವಿಷ್ಣುವಿನಲ್ಲಿ ಪ್ರಾರ್ಥಿಸಬೇಕೆಂದು ತಿಳಿಸಿದ್ದಾರೆ. ನಾವು ಭ್ರಷ್ಟರೊಡಗೂಡಿ ಕೆಟ್ಟ ಕೆಲಸ ಮಾಡಿದೆವೆಂದಾದರೆ ನಮ್ಮ ಉದ್ದಾರವಾಗದೇ ಅಧಃಪತನವನ್ನು ಹೊಂದುತ್ತೇವೆ. ಆದ್ದರಿಂದ ನಮ್ಮ ಏಳ್ಗೆಯಾಗಬೇಕೆಂದರೆ ಭಗವದ್ಭಕ್ತರಾದ ಸಜ್ಜನರ ಸಂಗವನ್ನು ಮಾಡಬೇಕು. ಆಗ ನಾವು ಭಗವತ್ಪ್ರೀತಿಕರವಾದ ಕೆಲಸವನ್ನು ಮಾಡಿ ಭಗವಂತನನ್ನು ಹೊಂದಲು ಅನುಕೂಲವಾಗುತ್ತದೆ ಎಂಬುದು ಕನಕದಾಸರ ಮಾತಿನ ತಾತ್ಪರ್ಯ. ಆದ್ದರಿಂದ ನಾವೂ ಕೂಡ ಭ್ರಷ್ಟರ ಸಂಗವನ್ನು ಬಿಟ್ಟು ಶಿಷ್ಟರ ಸಂಗವನ್ನು ಮಾಡಿ ವಿಶಿಷ್ಟ ಗುಣಸಂಪನ್ನನಾದ ವಿಷ್ಣುವು ತುಷ್ಟನಾಗುವಂತಹ ಕೆಲಸವನ್ನು ಮಾಡಿ ಭಗವತ್ಪ್ರೀತಿಗೆ ಪಾತ್ರರಾಗೋಣ. ★

# ಭಕ್ತ ಆಂಜನೇಯನಿಂದಲೇ ಭಯೋತ್ಪಾದನೆಯ ಸಮಸ್ಯೆಯ ಪರಿಹಾರ

ಬರಹ–ಸಗ್ರಿ ನೆರವು–ರಾಘವೇಂದ್ರ ಮುಟ್ಲುಪಾಡಿ

'ಎಲ್ಲೆಡೆ ಕಾಡುತ್ತಿರುವ ಜ್ವಲಂತ ಸಮಸ್ಯೆ ಭಯೋತ್ಪಾದನೆಯ ಸಮಸ್ಯೆ. ಅದಕ್ಕೆ ಭಕ್ತ ಆಂಜನೇಯನಿಂದಲೇ ಪರಿಹಾರ ದೊರಕಲು ಸಾಧ್ಯ. ರಾವಣ ಮುಂತಾದ ದುಷ್ಟರನ್ನು ಸದೆ ಬಡಿಯುವಲ್ಲಿ ಶ್ರೀರಾಮಚಂದ್ರನಿಗೆ ಮುಖ್ಯವಾಗಿ ಸೇವೆ ಸಲ್ಲಿಸಿದ್ದ ಆಂಜನೇಯ ಯಾವಾಗಲೂ ಗದೆಯನ್ನು ಎತ್ತಿ ಹಿಡಿಯುತ್ತ ಸಜ್ಜನರಿಗೆ, ಭಕ್ತ ಜನತೆಗೆ ತೊಂದರೆ ಕೊಡುವ ದುಷ್ಟಶಕ್ತಿಗಳ ವಿರುದ್ಧ ತನ್ನ ಹೋರಾಟವನ್ನು ನಡೆಸುತ್ತಲೇ ಇರುವನು'.

ಇಂತಹ ಆಂಜನೇಯನ ಚಿಂತನೆ–ಸ್ಮರಣೆ–ಉಪಾಸನೆಗಳಿಂದಷ್ಟೇ ಭಯೋತ್ಪಾದನೆಯ ದುಷ್ಟ ಶಕ್ತಿಗಳನ್ನು ನಿಗ್ರಹಿಸಬಹುದಾಗಿದೆ.

ಹೀಗೆ ಶ್ರೀವಿದ್ಯಾಧೀಶತೀರ್ಥರು ಪಲಿಮಾರು ಗ್ರಾಮದ ಪಲಿಮಾರುಮಠದಲ್ಲಿ ನಡೆದ ಹನುಮಜ್ಜಯಂತ್ಯುತ್ಸವದಂದು ಅಭಿಪ್ರಾಯಪಟ್ಟರು.

ಜಯಂತ್ಯುತ್ಸವವನ್ನು ದೀಪ ಹಚ್ಚುವ ಮೂಲಕ ಉದ್ಘಾಟಿಸಿದ ಸಚಿವ ಡಾ। ವಿ.ಎಸ್. ಆಚಾರ್ಯರು ಜಗತ್ತಿನಾದ್ಯಂತ ಅಮೇರಿಕಾ, ಇಂಡೋನೇಷ್ಯಾ ಮುಂತಾದ ದೇಶಗಳಲ್ಲೂ ಗಣಪತಿಯ ಆರಾಧನೆಯಂತೆ ಆಂಜನೇಯನ ಆರಾಧನೆ ಹೇಗೆ ಹರಡಿದೆ ಎಂದು ವಿವರಿಸಿದರು.

ಬೆಂಗಳೂರಿನ ಪ್ರಸಿದ್ಧ ವಿದ್ವಾಂಸರಾದ ಡಾ। ಪ್ರಭಂಜನಾಚಾರ್ಯರು ವಾಯುಸ್ತುತಿಯ ಬಗ್ಗೆ ಪ್ರವಚನ ನೀಡುತ್ತ ಆಂಜನೇಯನ ಬ್ರಹ್ಮಚರ್ಯಾದಿಗಳ ಬಗ್ಗೆ ಸ್ಪಷ್ಟಪಡಿಸಿದರು. ಮಧ್ವನಾಮದ ಮೊದಲ ಪದ್ಯದ ಬಗ್ಗೆ ತಿಳಿಸುತ್ತ ಆಂಜನೇಯನ 'ಹನೂಮಾನ್' ನಾಮದ ವೈಶಿಷ್ಟ್ಯವನ್ನು ಸಂಗ್ರಹರಾಮಾಯಣದ ಆಧಾರದಲ್ಲಿ ಸಾರಿದರು.

ಡಾ। ತನ್ಮಯಗೋಸ್ವಾಮಿ, ಅಪ್ಪಣಾಚಾರ್ಯರು, ಸದಾನಂದಶಾಸ್ತ್ರಿ–ಆಂಜನೇಯನ, ಪ್ರಾಣದೇವರ ಸುಂದರ ಕಾಂಡದ ಬಗ್ಗೆ ಉಪನ್ಯಾಸ ನೀಡಿದರು.

ಶ್ರೀಮಠದ ವಿಶೇಷಾಭಿಮಾನಿಗಳಾದ ಚೆನ್ನೈರಾಮಪ್ರಸಾದ, ಪಾವಂಜೆ ವಾಸುದೇವಭಟ್, ಶ್ರೀಕಾಂತಕೆಮ್ತೂರ್, ಇವರನ್ನು ಶ್ರೀಪಾದರು ಸಮ್ಮಾನಿಸಿ ಅನುಗ್ರಹಿಸಿದರು.

## ‘ಯೋಗದೀಪಿಕಾ’ದ ಘಟಿಕೋತ್ಸವ

07–04–2009ರಿಂದ ಮೂರು ದಿನಗಳ ಕಾಲ ನಡೆದ ಹನೂಮಜ್ಜಯಂತಿಯತ್ಯುತ್ಸವ ಆರಂಭವಾದದ್ದು 07–04–2009ರಂದು ನಡೆದ ‘ಯೋಗದೀಪಿಕಾ’ ದ ಘಟಿಕೋತ್ಸವದೊಂದಿಗೆ. ಯೋಗದೀಪಿಕಾದಲ್ಲಿ ಆರು ವರ್ಷಗಳ ಕಾಲ ವಿದ್ಯಾಭ್ಯಾಸ ನಡೆಸಿ ಪೂರೈಸಿದ ಸುದರ್ಶನ ಬನ್ನಿಂತಾಯ, ವಿಶ್ವವಿಜಯ ದೇವಪೂಜಿತ್ತಾಯ, ಗುರುರಾಜ ಉಪಾರ್ಣ ಹಾಗೂ ಭಾರ್ಗವ ಭಟ್ಟ–ಈ ನಾಲ್ಕು ವಿದ್ಯಾರ್ಥಿಗಳನ್ನು ಕುರಿತು ಘಟಿಕೋತ್ಸವ ನಡೆದಿತ್ತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀವಿಶ್ವೇಶತೀರ್ಥರು ಕರಾವಳಿ ಜಿಲ್ಲೆಯಲ್ಲಿ ಮಾಧ್ವಸಂಸ್ಕೃತಿಯ ಬಗ್ಗೆ ನಡೆಯುತ್ತಿರುವ ಉಪೇಕ್ಷೆಯ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ ಅದರ ವಿರುದ್ಧ ಪುರೋಹಿತರು, ವಿದ್ವಾಂಸರು ಕ್ರಿಯಾಶೀಲರಾಗಬೇಕೆಂದು ಕರೆನೀಡಿದರು. ಗುರುಕುಲದ ಕುಲಪತಿಗಳಾದ ಶ್ರೀವಿದ್ಯಾಧೀಶತೀರ್ಥರು ವಿದ್ಯಾರ್ಥಿಗಳಿಗೆ ಅನುಶಾಸನ ರೂಪದಲ್ಲಿ ಜ್ಞಾನದ ಜೊತೆಗೆ ಕರ್ಮವನ್ನೂ ನಡೆಸಲು ಕರೆ ನೀಡಿದರು. ಮುಂಬಯಿಯ ನಾಗರಹಳ್ಳಿ ಪ್ರಹ್ಲಾದಾಚಾರ್ಯರು ವೇದವಾಙ್ಮಯದ ಹಿರಿಮೆಯನ್ನು ಸಾರುತ್ತ ಘಟಿಕೋಪನ್ಯಾಸವನ್ನು ನೀಡಿದರು. ಶಿಬರೂರು ಹಯಗ್ರೀವತಂತ್ರಿಗಳಿಗೂ, ವಟ್ಟಂಗಾಡು ಹರಿಆಚಾರ್ಯರಿಗೂ ಶ್ರೀರಾಜರಾಜೇಶ್ವರ ಪ್ರಶಸ್ತಿಯನ್ನು ನೀಡಿ ಅನುಗ್ರಹಿಸಲಾಯಿತು. ಪೇಜಾವರ ಮಠದ ಶ್ರೀವಿಶ್ವಪ್ರಸನ್ನತೀರ್ಥರೂ, ಕಾಣಿಯೂರು ಮಠದ ಶ್ರೀವಿದ್ಯಾವಲ್ಲಭತೀರ್ಥರೂ, ಸೋದೆಮಠದ ಶ್ರೀವಿಶ್ವವಲ್ಲಭ ತೀರ್ಥರೂ ಉಪಸ್ಥಿತರಿದ್ದು ಅನುಗ್ರಹಿಸಿದರು.

## ಜ್ಯೋತಿಷಗೋಷ್ಠಿ ಪುರೋಹಿತಗೋಷ್ಠಿ

07–04–2009ರಂದು ಅಪರಾಹ್ಣ ಶ್ರೀವಿಶ್ವಪ್ರಸನ್ನತೀರ್ಥರ ಅಧ್ಯಕ್ಷತೆಯಲ್ಲಿ ಜ್ಯೋತಿಷಗೋಷ್ಠಿ ನಡೆಯಿತು. ಬೈಲೂರು ಪದ್ಮನಾಭತಂತ್ರಿಗಳು ಅನುವಾದಿಸಿದ ಮುಹೂರ್ತಪದವೀಕೃತಿಯ ಬಿಡುಗಡೆ ನಡೆಯಿತು. ಕೆಮ್ಮಣ್ಣು ಪ್ರಸನ್ನಾಚಾರ್ಯರು, ಗೋಪಾಲಕೃಷ್ಣ ಜೋಯಿಸ, ಶಿವಪ್ರಸಾದ ತಂತ್ರೀ–ಮುಹೂರ್ತದ ಬೇರೆ ಬೇರೆ ವಿಷಯದ ಬಗ್ಗೆ ಪ್ರಬಂಧವನ್ನು ಮಂಡಿಸಿದರು. ಪ್ರತಿವರ್ಷವೂ ಹನುಮಜ್ಜಂತಿಯ ಸಂದರ್ಭದಲ್ಲಿ ದಿನವಿಡೀ ಜ್ಯೋತಿಷಗೋಷ್ಠಿ ನಡೆಸುವಂತಾಗಬೇಕೆಂದು ನಿರ್ಧರಿಸಲಾಯಿತು.

(44ನೇ ಪುಟದಲ್ಲಿ)

# ಶ್ರೀ ಕೃಷ್ಣಂ ವಂದೇ ಜಗದ್ಗುರುಂ
# ಶ್ರೀ ಶ್ರೀ ವಿದ್ಯಾಮಾನ್ಯಸ್ತುತಿ ಕುಸುಮಾಂಜಲಿ

–ಬಡನಿಡಿಯೂರು ವಾಸುದೇವ ಭಟ್

ವಿದ್ಯಾಮಾನ್ಯಾಂಶ್ಚ ವಿಶ್ವೇಶಾನ್ನತ್ವಾ ಸಾರ್ಥಾಭಿದಾನ್ ಗುರೂನ್ ।
ವಿದ್ಯಾಮಾನ್ಯಸ್ತುತೇರ್ಮಾಲಾ ತತ್ಪಾದಕಮಲೇಽರ್ಪ್ಯತೇ ॥

ವಿದ್ಯಾಧೀಶಶ್ಚ ವಿಶ್ವೇಶಃ ಶಾಖೇಶಾಸ್ತ್ರ ಫಲಾನ್ವಿತೇ ।
ವಿದ್ಯಾಮಾನ್ಯಯತೇಃ ಕಲ್ಪತರೋರ್ಭಾತಾಮ್ ॥

ಶ್ರೀವಿಷ್ಣುರ್ಭಗವಾನ್ಸುರೋತ್ತಮಯತೇರ್ವಂಶೇಹಿಸಚ್ಛಾಸ್ತ್ರವಿದ್– ।
ವಿದ್ಯಾಮಾನ್ಯಕರಾಬ್ಜ ಪೂಜಿತತನುಃ ಶ್ರೀರಾಮರೂಪೇ ಪುರಾ ।
ಸಂತೃಪ್ತೋನ ತು ತೇನ ವೃದ್ಧಯತಿನಾ ಶ್ರೀಕೃಷ್ಣರೂಪೇ ಪುನಃ ।
ಪೂಜಾಮಾಪ್ಯ ತದಾತ್ಮಕಾಂಚನರತೇ ದೇದೀಪ್ಯತೇಽಲಂ ಮುದಾ ॥

ವಿದ್ಯಾಮಾನ್ಯಶಿವೇನ ಮಧ್ವಸಮಸಚ್ಛಾಸ್ತ್ರಂ ಹಿ ಚಂದ್ರೀಕೃತಂ ।
ವಿದ್ಯಾಧೀಶ ಸುಕೃಷ್ಣಪೂಜನಂ ವಿದೋ ಸಾಕ್ಷಾತ್ ಸುಮಧ್ವಾಯಿತಂ ।
ವಿದ್ಯಾಧೀಶ ಸುಶಾಸ್ತ್ರ ದುಗ್ಧವಿಧೌ ಶ್ರೀಕಾಮಧೇನ್ವಾಯಿತಂ ।
ವಿದ್ಯಾಭಾಸಕುಮತ್ತ ಕುಂಭಿದಲನೇ ಶಾರ್ದೂಲವಿಕ್ರೀಡಿತಂ ॥

ಶ್ರೀ ವಿಶ್ವೇಶಯತೀಶನಾಮಕಪೃಥು ಪೃಥ್ವೀಪತಿಪ್ರಾರ್ಥಿತೇ ।
ವಿದ್ಯಾಮಾನ್ಯ ಸುಮೇರುಭೂಭೃತಿ ಸತಿ ಪ್ರಜ್ಞಾಪಯೋದೋಗ್ಧರಿ ।
ಪೂರ್ಣಪ್ರಜ್ಞಜಗದ್ಗುರೋಃ ಸಕಲ ಸಚ್ಛಾಸ್ತ್ರಾಖ್ಯ ಧೇನೋರಲಂ ।
ವಿದ್ಯಾಧೀಶ ಸುವತ್ಸಕೋ ವಿಜಯತಾಂ ಜ್ಞಾನಾಮೃತ ಕ್ಷೀರಪಃ ॥

ವಿದ್ಯಾವಾಂಭಿಸುಚಾತಕಪ್ರತತಯೇಸುಜ್ಞಾನಮೇಧಾಯಿತಮ್ ।
ವಿದ್ಯಾಭಾಸತಮೋನಿವಾರಣವಿಧೌಸುಜ್ಞಾನಸೂರ್ಯಾಯಿತಮ್ ।
ವಿದ್ಯಾಮಾನ್ಯಮುನಿಂ ಗತಾಜಯತಿಯಮ್ ವಿದ್ಯಾನವದ್ಯಾಹ್ಯಸೌ ।
ವಿದ್ಯಾಮಾನ್ಯಯತಿರ್ಭುವೇವಿಜಯತೇ ವಿಶ್ವೇಶತೀರ್ಥಪ್ರದಃ ॥

ಸತ್ಯಧ್ಯಾನಮುನೀಂದ್ರ ವಿಷ್ಣುಪದಜ ಶ್ರೀಮಧ್ವಶಾಸ್ತ್ರಭಿಧ ।
ತ್ರಿಸ್ರೋತಾಮೃತಮಗ್ನಪಾವಿತತನುಃ ಶ್ರೀರಾಮಸಂಪೂಜಕಃ ।
ಶ್ರೀಮನ್ನ್ಯಾಯಸುಧಾಸುಧಾಕರಮುಖೋ ಮಧ್ವಾಗಮಾಹಸ್ಕರೋ ।
ವಿದ್ಯಾಮಾನ್ಯಯತೀಶ್ವರೋ ವಿಜಯತಾಂ ವಿಶ್ವೇಶತೀರ್ಥಸ್ಥಿತಃ ॥

ವಿದ್ವದ್ಭಿರ್ಮಾನ್ಯಾನ್ ವಿದ್ಯಾಭಿರ್ಮಾನ್ಯಾನ್ ।
ಖಂಡಯತೋಽದ್ವೈತಂ ಮಂಡಯತೋದ್ವೈತಮ್ ।
ಶ್ರೀಮನ್ನ್ಯಾಯಸುಧಾಗ್ರಂಥಂ ಸಂಭಿಷ್ಯಾನ್ ।
ಬೋಧಯತೋ ವಿದ್ಯಾಮಾನ್ಯಾನ್ವಂದೇಽಹಂ ॥

ಭಂಡಾರಕೇರಿ ಸಪ್ತಕ್ಷೇತ್ರಂ ಮುಖ್ಯಪ್ರಾಣ ಪ್ರತಿಷ್ಠಿತಂ ।
ಯೋಽಕರೋಜ್ಞಾನ ಭಂಡಾರಂ ವಿದ್ಯಾಮಾನ್ಯಂ ನಮಾಮಿತಂ ॥

ಸಮರ್ಚಿತೋ ಯೋ ಗುರುವರ್ಯ ವಿದ್ಯಾಮಾನ್ಯೈಶ್ಚ ವಿಶ್ವೇಶಯತಿಸ್ತುತೋಽಸೌ ।
ತತ್ಪಾದಕಂಜೇಮಧುಪಂ ಸದಾಮಾನ್ ಜ್ಞಾನವ್ರತಂ ಪಾಯಯತಾದ್ಧಿಕೃಷ್ಣಃ ॥

ಇತ್ಯೇವಂ ವಾಸುದೇವೇನ ವಿದ್ಯಾಮಾನ್ಯನುತಿಃ ಕೃತಾ ।
ಅರ್ಪಿತಾ ವಾಸುದೇವಾಯ ವಾಸುದೇವಃ ಪ್ರಸೀದತು ॥

॥ ಶ್ರೀಕೃಷ್ಣಾರ್ಪಣಮಸ್ತು॥